22 July 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 232 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಭಾವನಾಂತರಂಗ

ನಮ್ಮ ಸಂಪತ್ತು ಕಂಡು ನಮ್ಮ ಜೊತೆಗೆ ಇರುವವರು ನಮ್ಮವರಲ್ಲ! ನಮ್ಮ ಜೀವನದ ಕಷ್ಟದಲ್ಲೂ ಭಾಗಿಯಾಗುವವರು ನಮ್ಮವರು!

-ಸ್ನೇಹಾ ಆನಂದ್

ಡಾ.ಕೆ.ಆರ್.ಪ್ರದೀಪ್ ಅವರಿಗೆ ಜು.24ರಂದು ಅಭಿನಂದನಾ ಕಾರ್ಯಕ್ರಮ ಪುಟ ಸಂ. 2

ಸಾಮೂಹಿಕ ಅತ್ಯಾಚಾರ ಪ್ರಕರಣ: ಮೂವರ ಬಂಧನ ಪುಟ ಸಂ. 3



ಎಚ್.ಡಿ.ಕೋಟೆ: ತಾಲೂಕು ಆಸ್ಪತ್ರೆಗೆ ಬೇಕು ತುರ್ತುಚಿಕಿತ್ಸೆ ಪುಟ ಸಂ. 4

ಮೋದಿ ನಿವಾಸಕ್ಕೆ ಕೈ ಮುತ್ತಿಗೆ

ಪೊಲೀಸರ ಹಲ್ಲೆಗೆ ಆಕ್ರೋಶ: ರಾಹುಲ್, ಪ್ರಿಯಾಂಕ ಗಾಂಧಿ ಬಂಧನ

ನವದೆಹಲಿ: ದೆಹಲಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಬೆಂಬಲಿಗರು ವುತ್ತು ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ದಾಳಿ ಖಂಡಿಸಿ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಮಂಗಳ ವಾರ ಪ್ರಧಾನಿ ಮೋದಿ ನಿವಾಸದ ಮುಂದೆ ಧರಣಿ ನಡೆಸಿದರು.

ಯುವ ವಿದ್ಯಾರ್ಥಿಗಳ ಮೇಲೆ ನಡೆದ ಪೊಲೀಸರ ಕ್ರೂರ ವರ್ತನೆ, ದೌರ್ಜನ್ಯಕ್ಕೆ ಪ್ರಧಾನಿ ಮೋದಿ ಅವರಿಂದ ಉತ್ತರ ಕೇಳಲು ನಾವಿಲ್ಲಿಗೆ ಬಂದಿದ್ದೇವೆ. ದೇಶದ ಯುವಜನರ ಭವಿಷ್ಯ ಹಾಳು ಮಾಡಿದ ಕಾರಣ ಪ್ರಧಾನಿ ಹಾಗೂ ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದು ರಾಹುಲ್ ಗಾಂಧಿ ಆಗ್ರಹಿಸಿದರು.

ರಾಹುಲ್ ಗಾಂಧಿ ಅವರೊಂದಿಗೆ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ಕೆ.ಎಚ್ ಮುನಿಯಪ್ಪ ಸೇರಿದಂತೆ ಕಾಂಗ್ರೆಸ್ ನಾಯಕರು ಲೋಕ ಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಿಗಳ ಅಧಿಕೃತ ನಿವಾಸದ ಎದುರು ನೆಲದ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಘೋಷಣೆ ಕೂಗಿದರು.

ಪ್ರಧಾನಮಂತ್ರಿ ನಿವಾಸ ಭದ್ರತಾ ವಲಯವಾಗಿರುವ ಹಿನ್ನೆಲೆಯಲ್ಲಿ ಧರಣಿ ಅಂತ್ಯಗೊಳಿಸುವಂತೆ ಪೊಲೀಸರು ಕಾಂಗ್ರೆಸ್ ನಾಯಕರಿಗೆ ಮನವಿ ಮಾಡಿದರು. ಆದರೆ ಪೊಲೀಸರ ಮನವಿಗೆ ಒಪ್ಪದ ಹಿನ್ನೆಲೆ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ಪೊಲೀಸರು ವಶಕ್ಕೆ ಪಡೆದರು.

ಪೊಲೀಸರ ಹಲ್ಲೆ ಐಸಿಯುನಲ್ಲಿ ಯುವತಿ

ನವದೆಹಲಿ: ನವದೆಹಲಿಯಲ್ಲಿ ನಡೆದ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ಪ್ರತಿಭಟನೆ ಸಂದರ್ಭ ಪೊಲೀಸರು ನಡೆಸಿದ ಲಾಠಿ ಚಾರ್ಜ್ ವೇಳೆ ತೀವ್ರ ಗಾಯಗೊಂಡಿದ್ದ ಯುವತಿ ರಾಮ್ ಮನೋಹರ್ ಲೋಹಿಯಾ(ಆರ್ಎಂಎಲ್) ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವೆಂಟಿಲೇಟರ್ ಬೆಂಬಲ ನೀಡಲಾಗಿದೆ ಎಂದು ಮಂಗಳವಾರ ತಿಳಿದುಬಂದಿದೆ. ನೀಟ್ ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ, ವಿದ್ಯಾರ್ಥಿಗಳ ಆತ್ಮಹತ್ಯೆ ಮತ್ತು ದೇಶದ ಪರೀಕ್ಷಾ ವ್ಯವಸ್ಥೆಗೆ ಸಂಬಂಧಿಸಿದ ತೀವ್ರ ಕಳವಳಗಳ ಹಿನ್ನೆಲೆಯಲ್ಲಿ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಮುಂಗಾರು ಅಧಿವೇಶನದ ಮೊದಲ ದಿನವಾದ ಸೋಮವಾರ ಸಿಜೆಪಿ ಸಂಸತ್ ಚಲೋ ಮೆರವಣಿಗೆ ನಡೆಸಿತ್ತು. ಈ ಸಂದರ್ಭ 118ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಮತ್ತು 60 ಪ್ರತಿಭಟನಾಕಾರರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದರು.

ಎಸ್ಐಆರ್ ನೆರವಿಗೆ ಪಿಆರ್‌ಸಿ

10 ವರ್ಷದಿಂದ ವಾಸಿಸುವವರಿಗೆ ಪ್ರಮಾಣಪತ್ರ: ಪರಮೇಶ್ವರ್

ಬೆಂಗಳೂರು: ಶಾಶ್ವತ ನಿವಾಸಿ ಪ್ರಮಾಣಪತ್ರ (ಪಿಆರ್‌ಸಿ) ವಿತರಿಸುವ ರಾಜ್ಯ ಸರ್ಕಾರದ ನಿರ್ಧಾರವನ್ನು ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ನೈಜ ನಿವಾಸಿಗಳಿಗೆ ನೆರವಾಗುವ ಉದ್ದೇಶದಿಂದ ಕ್ರಮ ಕೈಗೊಳ್ಳಲಾಗಿದೆ. ಇದನ್ನು ರಾಜಕೀಯಗೊಳಿಸಬಾರದು ಎಂದು ಹೇಳಿದರು.

ಎಸ್ಐಆರ್ ವೇಳೆ ಹಳೆಯ ಮತದಾರರ ಪಟ್ಟಿಯ ದಾಖಲೆಗಳನ್ನು ಪುಟ 2ಕ್ಕೆ

ಅತ್ಯಾಚಾರಕ್ಕೆ ಯತ್ನ: ಯುವಕನ ಬಂಧನ

ಮೈಸೂರು: ಅಪ್ರಾಪ್ತೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಯುವಕನನ್ನು ಪೊಲೀಸರು ಬಂಧಿಸಿರುವ ಘಟನೆ ನಂಜನಗೂಡು ತಾಲೂಕಿನಲ್ಲಿ ನಡೆದಿದೆ.

ಮನೆಯಲ್ಲಿ ಒಂಟಿಯಾಗಿದ್ದ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯುವಕ ಯತ್ನಿಸಿದ್ದಾನೆ. 23 ವರ್ಷದ ಸುರೇಶ್ ಬಂಧಿತ ಆರೋಪಿ. ತಂದೆ ತಾಯಿ ಕೂಲಿ ಕೆಲಸಕ್ಕೆ ಹೋಗಿರುವಾಗ ಮನೆಗೆ ನುಗ್ಗಿದ ಆರೋಪಿ ಬಾಲಕಿಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಈ ವೇಳೆ ಬಾಲಕಿಯ ಕೂಗಾಟ ಕೇಳಿ ಅಕ್ಕಪಕ್ಕದ ಮನೆಯವರು ಬಂದಿದ್ದಾರೆ. ಯುವಕನನ್ನು ಹಿಡಿದು ಹುಲ್ಲಹಳ್ಳಿ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಸಂಪುಟ ವಿಸ್ತರಣೆಗೆ ಮುಹೂರ್ತ

ಲೋಕಭವನದಲ್ಲಿ ಸಚಿವರ ಪ್ರಮಾಣ ವಚನಕ್ಕೆ ಸಿದ್ಧತೆ

ನವದೆಹಲಿ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ವಿಸ್ತರಣೆ ಬುಧವಾರ ನಡೆಯುವುದು ಬಹುತೇಕ ಖಚಿತವಾಗಿದೆ. ಈ ಬಾರಿ ಹೊಸ ಸಮೀಕರಣದೊಂದಿಗೆ ಸಚಿವ ಸ್ಥಾನ ಭರ್ತಿ ಮಾಡಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದೆ.

ಈ ಮೂಲಕ ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಯಾವಾಗ ಎಂಬ ಕುತೂಹಲಕ್ಕೆ ತೆರೆ ಬೀಳುವ ಸಾಧ್ಯತೆ ಇದೆ. ಲೋಕಭವನದಲ್ಲಿ ಸಚಿವರ ಪ್ರಮಾಣ ವಚನಕ್ಕೆ ಸಿದ್ಧತೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ.

ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಡೆಸಲು ಬೇಕಾದಂತಹ ಸಿದ್ಧತೆ ನಡೆಯುತ್ತಿದೆ. ಲೋಕಭವವನದ ಮುಂದೆ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದೆ. ಹೆಚ್ಚುವರಿ ಪೊಲೀಸ್ ಭದ್ರತೆ ನೀಡಲಾಗಿದೆ. ಶಾಮಿಯಾನ ಹಾಗೂ ಆಸನಗಳನ್ನು ತರಲಾಗುತ್ತಿದೆ.

ದೆಹಲಿಯ ಕಾಂಗ್ರೆಸ್ ಹೈಕಮಾಂಡ್ ಅಂಗಳದಲ್ಲಿ ಇಂದೇ ಪಟ್ಟಿ ಫೈನಲ್ ಆದರೆ ಬುಧವಾರವೇ ಸಂಪುಟ ವಿಸ್ತರಣೆ ನಡೆಯಲಿದೆ ಎನ್ನಲಾಗಿದೆ. ತಡರಾತ್ರಿ ಹೈಕಮಾಂಡ್ ಜೊತೆ ಸಭೆ ನಡೆದರೆ ನಾಳೆಯೇ ಸಂಪುಟ ವಿಸ್ತರಣೆ ಆಗಬಹುದು. ಮಾತುಕತೆ ಪುಟ 2ಕ್ಕೆ

ದೆಹಲಿಗೆ ಒಟ್ಟಿಗೆ ಹಾರಿದ ಡಿಕೆಶಿ, ಸಿದ್ದು, ಬಿಕೆಎಚ್

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಅವರು ಮಂಗಳವಾರ ಒಂದೇ ವಿಮಾನದಲ್ಲಿ ದೆಹಲಿಯಲ್ಲಿ ತೆರಳಿದರು. ನೂತನ ಸಚಿವರ ಪಟ್ಟಿ ಅಂತಿಮವಾಗುವ ಸಾಧ್ಯತೆ ಇದೆ.

ಈ ಮೂವರು ನಾಯಕರು ಮಂಗಳವಾರ ಬೆಳಗ್ಗೆ 9 ಗಂಟೆಯ ಸುಮಾರಿಗೆ ಎಚ್ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ದೆಹಲಿಗೆ ಹಾರಿದರು. ದೆಹಲಿಯಲ್ಲಿ ಕಾಂಗ್ರೆಸ್‌ನ ಉನ್ನತ ನಾಯಕರೊಂದಿಗೆ ಚರ್ಚೆ ಪುಟ 2ಕ್ಕೆ

ಭವಿಷ್ಯದ ಜೊತೆ ಆಟವಾಡಲು ಬಿಡಲ್ಲ

ನೀಟ್ ಹಗರಣ ಕುರಿತು ಮೊದಲ ಬಾರಿಗೆ ಮೋದಿ ಮಾತು

ನವದೆಹಲಿ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಂಡಿದೆ. ಯುವಕರ ಭವಿಷ್ಯದ ಜೊತೆ ಯಾರೂ ಆಟವಾಡಲು ಅವಕಾಶ ನೀಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನೀಟ್ ಅಕ್ರಮ ಪ್ರಕರಣದ ನಂತರ ಮೊದಲ ಬಾರಿಗೆ ಈ ಕುರಿತು ಪ್ರಧಾನಿ ಮೋದಿ ಅವರು ಮಂಗಳವಾರ ಮಾತನಾಡಿದರು. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಸಂಸದೀಯ ಪಕ್ಷದ 'ಮಂಗಲ್ ಮಿಲನ್' ಸಭೆಯಲ್ಲಿ ಪ್ರಧಾನಿ ಮೋದಿ ಈ ವಿಷಯ ಪ್ರಸ್ತಾಪಿಸಿದರು.

ನೀಟ್ ಪರೀಕ್ಷೆಯ ಅಕ್ರಮಗಳನ್ನು ವಿರೋಧಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ನೇತೃತ್ವದಲ್ಲಿ ಸಾವಿರಾರು ವಿದ್ಯಾರ್ಥಿಗಳು 'ಸಂಸತ್ ಚಲೋ' ನಡೆಸಿದ ಹಿನ್ನೆಲೆಯಲ್ಲಿ ಮೋದಿ ಮಾತನಾಡಿದರು.

ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಕೇಂದ್ರ ಮತ್ತು ರಾಜ್ಯ ಸರ್ಕಾರ ರಾಜಕೀಯ ಭೇದ ಮರೆತು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಪ್ರಶ್ನೆಪತ್ರಿಕೆ ಸೋರಿಕೆ ಬೆಳಕಿಗೆ ಬಂದ ತಕ್ಷಣವೇ ಸರ್ಕಾರ ಕ್ರಮಕೈಗೊಂಡಿದೆ. ಪ್ರಕರಣದಲ್ಲಿ 13 ಮಂದಿಯನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳಲು ನೀಟ್ ಮರುಪರೀಕ್ಷೆಗೆ ಆದ್ಯತೆ ನೀಡಲಾಯಿತು. ಫಲಿತಾಂಶವನ್ನೂ ಯಾವುದೇ ಪುಟ 2ಕ್ಕೆ

ಕೊಡಗಿನಲ್ಲಿ ಮಳೆ: ಹಾರಂಗಿ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಬಿಡುವು ನೀಡಿದ್ದ ಮಳೆ ಈಗ ಮತ್ತೆ ಬಿರುಸುಗೊಂಡಿದೆ. ಮಳೆಯ ಪರಿಣಾಮ ಹಾರಂಗಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಕಾವೇರಿ ಜಲಾನಯನ ಪ್ರದೇಶದ ಜನರಲ್ಲಿ ಹರ್ಷ ತಂದಿದೆ.



ಹಾರಂಗಿ ಜಲಾಶಯಕ್ಕೆ 3 ಸಾವಿರಕ್ಕೂ ಹೆಚ್ಚು ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಕಳೆದ ಕೆಲ ದಿನಗಳಿಂದ ಮಳೆ ಕೊರತೆಯಿಂದ ಜಲಾಶಯದ ನೀರಿನ ಮಟ್ಟ ಕುಸಿದಿತ್ತು. ಕಳೆದ 4–5 ದಿನಗಳಿಂದ ಸುರಿಯುತ್ತಿರುವ ಮಳೆ ಆಶಾಕಿರಣ ಮೂಡಿಸಿದೆ. ಪ್ರಸ್ತುತ ಹಾರಂಗಿ ಜಲಾಶಯದಲ್ಲಿ 5.8 ಟಿಎಂಸಿ ನೀರು ಸಂಗ್ರಹವಾಗಿದೆ. ಇನ್ನೂ ಸುಮಾರು 8 ಅಡಿ ನೀರು ಸಂಗ್ರಹವಾದರೆ ಜಲಾಶಯ ಭರ್ತಿಯಾಗುವ ಸಾಧ್ಯತೆ ಇದೆ ಎಂದು ಪುಟ 2ಕ್ಕೆ

ಭೀಕರ ಅಪಘಾತ: ತಂದೆ–ಮಗಳು ಸಾವು

ವಿಜಯಪುರ: ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣದ ಮುದ್ದೇಬಿಹಾಳ ಕ್ರಾಸ್ ಬಳಿ ಮಂಗಳವಾರ ಲಾರಿಯೊಂದು ಟ್ರ್ಯಾಕ್ಟರ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಭೀಕರ ಅಪಘಾತದಲ್ಲಿ ತಂದೆ ಮತ್ತು ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮುದ್ದೇಬಿಹಾಳ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಅಪಘಾತ ಸಂಭವಿಸಿದೆ. ಟ್ರ್ಯಾಕ್ಟರ್‌ನಲ್ಲಿದ್ದ ತಂದೆ–ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಮತ್ತಿಬ್ಬರಿಗೆ ಗಾಯಗಳಾಗಿವೆ.

ಟ್ರ್ಯಾಕ್ಟರ್‌ನಲ್ಲಿ ಕಾರ್ಮಿಕರು ಕಬ್ಬು ಕಟಾವಿಗೆಂದು ಇಂಡಿಯಿಂದ ಮಂಡ್ಯಕ್ಕೆ ತೆರಳುತ್ತಿದ್ದರು. ಈ ವೇಳೆ ಪುಟ 2ಕ್ಕೆ

'ಮಿಷನ್ ಮೋಡ್'ನಲ್ಲಿ 72 ಸಾವಿರ ಹುದ್ದೆ ಭರ್ತಿಗೆ ಮೌದ್ಗಿಲ್ ಸೂಚನೆ

ಬೆಂಗಳೂರು: ರಾಜ್ಯ ಸರ್ಕಾರ ಆರಂಭಿಸಿರುವ 72,186 ಹುದ್ದೆಗಳ ಭರ್ತಿಗೆ ವೇಗ ನೀಡುವಂತೆ ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮುನೀಶ್ ಮೌದ್ಗಿಲ್ ಸೂಚನೆ ನೀಡಿದ್ದಾರೆ.

ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪತ್ರ ಬರೆದಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ನೇರ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿರುವ ಹುದ್ದೆಗಳು, ಕಲ್ಯಾಣ ಕರ್ನಾಟಕ ಪ್ರದೇಶದ ಶೇ.80 ಹುದ್ದೆಗಳಿಗೆ ಡೀಮ್ಡ್ ಅಪ್ರೂವಲ್ ಸೇರಿದಂತೆ ಒಟ್ಟು 72,186 ಹುದ್ದೆಗಳು ಇನ್ನೂ ಭರ್ತಿಯಾಗಬೇಕಿವೆ ಎಂದು ಉಲ್ಲೇಖಿಸಲಾಗಿದೆ.

ಈ ನೇಮಕಾತಿಯನ್ನು ಸರ್ಕಾರದ ಅತ್ಯುನ್ನತ ಆದ್ಯತೆ ಎಂದು ಪರಿಗಣಿಸಿ ಎಲ್ಲಾ ಇಲಾಖೆಗಳು ಮಿಷನ್ ಮೋಡ್‌ನಲ್ಲಿ ಕ್ರಮ

ಬಾಲಕಿಗೆ ಮದ್ಯ ಕುಡಿಸಿ ಅತ್ಯಾಚಾರ: ಮೂವರ ಬಂಧನ

ಚಿಕ್ಕಬಳ್ಳಾಪುರ: ಮದ್ಯ ಕುಡಿಸಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಇಬ್ಬರು ಕಾಮುಕರು ಹಾಗೂ ಅವರಿಗೆ ಸಹಕರಿಸಿದ ಮಹಿಳೆಯನ್ನು ದೇವನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಬಾಲಕಿಯನ್ನು ಆಟೋದಲ್ಲಿ ದೇವಸ್ಥಾನಕ್ಕೆ ಎಂದು ಮಹಿಳೆ ಕರೆದುಕೊಂಡು ಬಂದಿದ್ದಳು. ಬಳಿಕ ಇಬ್ಬರು ಕಾಮುಕರಿಗೆ ಬಾಲಕಿ ಒಪ್ಪಿಸಿದ್ದಳು. ನಂತರ ನಿರ್ಮಾಣ ಹಂತದ ಕಟ್ಟಡದಲ್ಲಿ ಬಾಲಕಿಗೆ ಮದ್ಯಪಾನ ಮಾಡಿಸಿ ಅತ್ಯಾಚಾರ ಎಸಗಿದ್ದರು. ಬೆಳಗ್ಗೆ ಬಾಲಕಿಯನ್ನು ಮನೆ ಬಳಿ ಬಿಟ್ಟು ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ರಾತ್ರಿಯೆಲ್ಲ ಮನೆಗೆ ಬಾರದೇ ಬೆಳಗ್ಗೆ ಮನೆಗೆ ಬಂದ ಮಗಳನ್ನು ಅನುಮಾನಗೊಂಡು ಪ್ರಶ್ನಿಸಿದ್ದ ಪುಟ 2ಕ್ಕೆ

ಒತ್ತುವರಿ ತೆರವು: ಜಿಬಿಎ ಅಧಿಕಾರಿಗಳ ಮೇಲೆ ಹಲ್ಲೆ

ಬೆಂಗಳೂರು: ಶಿವಾಜಿನಗರದಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಜಿಬಿಎ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಪುಂಡರ ಗುಂಪು ಪೆಪ್ಪರ್ ಸ್ಪ್ರೇ ಮಾಡಿ ಮಾರಣಾಂತಿಕ ಹಲ್ಲೆ ನಡೆಸಿದೆ.

ಬಸ್ ಸ್ಟ್ಯಾಂಡ್ ಬಳಿ ಮಂಗಳವಾರ ತೆರವು ಕಾರ್ಯಾಚರಣೆ ನಡೆಸುವಾಗ ಇನ್ನೋವಾ ಕಾರಿನಲ್ಲಿ ಬಂದ ಬಸವರಾಜ್ ಪಡುಕೋಟೆ ಹಾಗೂ ಆತನ ಗ್ಯಾಂಗ್ ಏಕಾಏಕಿ ಅಧಿಕಾರಿಗಳ ಮೇಲೆ ಮುಗಿಬಿದ್ದಿದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಾಧವ್ ರಾವ್ ಅವರನ್ನು ಅಟ್ಟಾಡಿಸಿಕೊಂಡು ಹಲ್ಲೆ ನಡೆಸಿದ್ದಾರೆ. ಅಲ್ಲದೆ ಹೆಲ್ಮೆಟ್ ಹಾಗೂ ಪ್ಲಾಸ್ಟಿಕ್ ಚೇರ್‌ಗಳಿಂದ ಮನಸೋಇಚ್ಛೆ ಹೊಡೆಯಲಾಗಿದೆ.

ನಮ್ಮ ಕರ್ನಾಟಕ ಸೇನೆ ಸಂಘಟನೆಯ ಬಸವರಾಜ್ ಹಾಗೂ ಆತನ ಬೆಂಬಲಿಗರು ಮಹಿಳಾ ಅಧಿಕಾರಿ ಮುಖಕ್ಕೆ ಪೆಪ್ಪರ್ ಸ್ಪ್ರೇ ಮಾಡಿದ್ದಾರೆ. ನಮಗೆ ಕೆಲಸ ಮಾಡಲು ಭಯವಾಗುತ್ತಿದೆ ಎಂದು ಅಧಿಕಾರಿ ಸಾವಿತ್ರಿ ತಿಳಿಸಿದ್ದಾರೆ.

ಸ್ಥಳದಲ್ಲಿ ನಾಲ್ಕು ಜನ ಪೊಲೀಸರಿದ್ದರೂ ಕ್ರಮಕೈಗೊಳ್ಳದೆ ಸುಮ್ಮನೆ ವೀಡಿಯೋ ಮಾಡುತ್ತಾ ನಿಂತಿದ್ದರು. ಸೂಕ್ಷ್ಮ

ಡಾ.ಕೆ.ಆರ್.ಪ್ರದೀಪ್ ಅವರಿಗೆ ಜು.24ರಂದು ಅಭಿನಂಧನಾ ಕಾರ್ಯಕ್ರಮ

ತುಮಕೂರು ವಿವಿಯಿಂದ ಗೌರವ ಡಾಕ್ಟರೇಟ್‌ಗೆ ಭಾಜನ | ಸರ್ವೋಚ್ಚ ನ್ಯಾಯಾಲಯದ ವಕೀಲ, ಚಾರ್ಟರ್ಡ್ ಅಕೌಂಟೆಂಟ್ ಆಗಿ ಸಾಮಾಜಿಕ ಕಳಕಳಿ

ರಾಮನಗರ: ರಾಮನಗರ ಮೂಲದ ಕೆ. ಆರ್.ಪ್ರದೀಪ್ ಅವರ ಶೈಕ್ಷಣಿಕ, ವೃತ್ತಿಯಲ್ಲಿನ ಸಾಧನೆ, ಸಮಾಜ ಸೇವೆ ಯನ್ನು ಗುರುತಿಸಿ ತುಮಕೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದ್ದು, ಈ ಹಿನ್ನೆಲೆಯಲ್ಲಿ ಇಲ್ಲಿನ ಆರ್ಯ ವೈಶ್ಯ ಸಭಾ, ವಾಸವಿ ವಿದ್ಯಾನಿಕೇತನ ಟ್ರಸ್ಟ್, ವಾಸವಿ ವನಿತಾ ಸಂಘ, ಶ್ರೀ ವಾಸವಿ ಯೂತ್ಸ್ ಫೋರಂ, ವಾಸವಿ ಇಂಟರ್‌ನ್ಯಾಷನಲ್ ಕ್ಲಬ್, ವಾಸವಿ ಭಜನಾ ಮಂಡಳಿಗಳು ಸಂಯುಕ್ತವಾಗಿ ಇದೇ ಜು.24ರಂದು ಅಭಿನಂದನಾ ಸಮಾರಂಭವನ್ನು ಹಮ್ಮಿಕೊಂಡಿವೆ.

ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ನಿಕಾಮಹಲ್ ನಲ್ಲಿ ಜು.24ರ ಸಂಜೆ 5.30ಕ್ಕೆ ನಡೆಯುವ ಈ ಸಮಾ ರಂಭದಲ್ಲಿ ನಗರದ ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಾಮಾಜಿಕ ಕಳಕಳಿ

ವೃತ್ತಿಪರತೆ, ಶೈಕ್ಷಣಿಕ ಅಪ್ರತಿಮತೆ ಮತ್ತು ಅತಿವಿರಳ ಲೋಕೋಪಕಾರದ ಸಾಧಕರಾದ ಕೆ.ಆರ್.ಪ್ರದೀಪ್

ಅನೇಕ ಜಿಲ್ಲೆಗಳಲ್ಲಿ ಅಗತ್ಯ ಸಂದರ್ಭಗಳಲ್ಲಿ ಆರ್ಥಿಕ ಮತ್ತು ಮಾರ್ಗದರ್ಶಕ ಸೇವೆಯನ್ನು ಸಲ್ಲಿಸಿದ್ದಾರೆ. ರಾಮನಗರದ ಮೂಲದವರಾಗಿರುವ ಇವರು ತಮ್ಮ ಬೇರುಗಳನ್ನು ಎಂದಿಗೂ ಮರೆತಿಲ್ಲ. ತಮ್ಮ ಸಹೋದರ ರವಿ ಸ್ಟೋರ್ಸ್ ಮಾಲೀಕರಾದ ಕೆ. ಆರ್.ನಾಗೇಶ್ ಅವರ ಮಾರ್ಗದರ್ಶನದಲ್ಲಿ ಅನೇಕ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಕಳೆದ 15 ವರ್ಷಗಳಿಂದ 3000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮುನ್ನೆಚ್ಚರಿಕೆ ಆರೋಗ್ಯ ರಕ್ಷಣೆಯ ಚಿಕಿತ್ಸೆ ಕೊಡಿಸಿದ್ದಾರೆ. ಸರ್ಕಾರಿ ಪದವಿ ಪೂರ್ವ ಕಾಲೇಜಿ ಸಭಾಂಗಣ ನಿರ್ಮಾಣಕ್ಕೆ ದೇಣಿಗೆ ನೀಡಿದ್ದಾರೆ. ಆದಿಚುಂಚನಗಿರಿ ಅಂಧರ ಶಾಲೆಯ ವಿದ್ಯಾರ್ಥಿಗಳಿಗೆ ಕಂಬಳಿ ಮತ್ತು ಬಟ್ಟೆಗಳ ಖರೀಧಿಗೆ ಧನಸಹಾಯ ಮಾಡಿದ್ದಾಖುಎ. ಶ್ರೀ ಬನ್ನಿಮಹಾಕಾಳಿ ಅಮ್ಮನವರ ದೇವಾಲ, ಬಲಮುರಿ ಗಣಪತಿ ದೇವಾಲಯ, ಶ್ರೀ ಅಕೇಶ್ವರ ಸ್ವಾಮಿ ದೇವಾಲಯ, ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯಗಳ ಗೋಪುರ ನಿರ್ಮಾಣಕ್ಕೆ ದೇಣಿಗೆ ನೀಡಿದ್ದಾರೆ. ಚನ್ನಪಟ್ಟಣದ ವಂದಾರಗುಪ್ಪೆಯ ಮಾರುತಿ ವಿದ್ಯಾಲಯಕ್ಕೆ ಗೋವುಗಳನ್ನು ಕೊಡಿಸಿದ್ದಾರೆ. ರಾಮನಗರದ ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ತರಗತಿಗಳ ನಿರ್ಮಾಣಕ್ಕೆ ಮತ್ತು ಶ್ರೀ ಕನ್ನಿಕಾ ಮಹಲ್ ನಿರ್ಮಾಣಕ್ಕೆ ಧನ ಸಹಾಯ ನೀಡಿದ್ದಾರೆ.

ಚಾರ್ಟರ್ಡ್ ಅಕೌಂಟೆಂಟ್ ಆಗಿ, ವಕೀಲರಾಗಿ ಡಾ.ಕೆ.ಆರ್.ಪ್ರದೀಪ್ ಅವರ ವೃತ್ತಿಯಲ್ಲಿಯೂ ದೇಶ ವಿದೇಶಗಳಲ್ಲಿ ಗಮನ ಸೆಳೆಯುವ ಸಾಧನೆಗಳನ್ನು ಮಾಡಿದ್ದಾರೆ. ಅನೇಕ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ವೃತ್ತಿಪರ ವೇದಿಕೆಗಳ ಸಂವಾದಗಳಲ್ಲಿ ಭಾಗಿಯಾಗಿದ್ದಾರೆ.

ಶೈಕ್ಷಣಿಕ ಮತ್ತು ವೃತ್ತಿಯಲ್ಲಿ ಸಾಧನೆ ಮಾಡಿರುವ ಕೆ.ಆರ್.ಪ್ರದೀಪ್ ದಕ್ಷ ಗೋಲ್ಫ್ ಆಟಗಾರರು ಆಗಿದ್ದಾರೆ. ಇವರ ವೃತ್ತಿ ಸಾಧನೆಗೆ ತಕ್ಕಂತೆ ಇವರ ಮಡದಿ ಅನುರಾಧ ಸಹ ಸಾಧಕರಾಗಿದ್ದಾರೆ. ವಕೀಲ ವೃತ್ತಿಯಲ್ಲಿರುವ ಶ್ರೀಮತಿ ಅನುರಾಧ ಅವರು ಸಹ ದೇಶದ ಪ್ರತಿಷ್ಠಿತ ಲೀಗಲ್ ಲ್ಯೂಮಿನರಿ ಅವಾರ್ಡ್ 2026ಕ್ಕೆ ಭಾಜನರಾಗಿದ್ದಾರೆ.

ಸಾಧಕ ದಂಪತಿಗಳ ನಿಸ್ವಾರ್ಥ ಸೇವೆಯನ್ನು ಗೌರವಿಸಿ ಸಾರ್ವಜನಿಕರ ಸಹಕಾರದಲ್ಲಿ ಆರ್ಯವೈಶ್ಯ ಸಂಘಟನೆಗಳು ಜುಲೈ. 24ರಂದು ಅಭಿನಂದನಾ ಸಮಾರಂಭವನ್ನು ಹಮ್ಮಿಕೊಂಡಿವೆ. ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ಡಾ.ಕೆ.ಆರ್.ಪ್ರದೀಪ್ ಶಿಕ್ಷಣ ಮತ್ತು ವೃತ್ತಿ

ಬಿ.ಬಿ.ಎಂ., ಎಫ್.ಸಿ.ಎ, ಎಲ್.ಎಲ್.ಬಿ ಪದವೀಧರ ಕೆ.ಆರ್.ಪ್ರದೀಪ್ 33 ವರ್ಷಗಳಿಂದ ಚಾರ್ಟರ್ಡ್ ಅಕೌಂಟೆಂಟ್(ಸಿಎ) ಮತ್ತು ಸರ್ವೋಚ್ಚ ಮತ್ತು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಿ.ಎ ಅಂತಿಮ ಪರೀಕ್ಷೆಯಲ್ಲಿ ಅಡ್ವಾನ್ಸ್ಡ್ ಅಕೌಂಟೆನ್ಸಿಯಲ್ಲಿ 100ಕ್ಕೆ 100 ಅಂಕಗಳನ್ನುಗಳಿಸಿ ರಾಷ್ಟ್ರಪತಿಗಳಿಂದ ಗೌರವಕ್ಕೆ ಪಾತ್ರರಾಗಿದ್ದರು. ಇಂದಿಗೂ ಸಹ ಈ ವಿಷಯದಲ್ಲಿ ಕೆ.ಆರ್.ಪ್ರದೀಪ್ ಅವರ ಸಾಧನೆಯನ್ನು ಯಾರು ಮುರಿಯಲಿಲ್ಲ ಎಂಬುದು ಗಮನಿಸಬೇಕಾದ ಅಂಶ. 1985ರಲ್ಲಿ ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ನಡೆದ ಮೂಟ್ ಕೋರ್ಟ್ (ವಿಶ್ವ ಕಾನೂನು ಸಂವಾದ) ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 28 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತಕ್ಕೆ 2ನೇ ಬಹುಮಾನ ಲಭಿಸಿತ್ತು. ತದನಂತರ ಇವರು ಭಾರತವನ್ನು ಅನೇಕ ಸ್ಪರ್ಧೆಗಳಲ್ಲಿ ಪ್ರತಿನಿಧಿಸಿ ದೇಶಕ್ಕೆ ಗೌರವ ತಂದು ಕೊಟ್ಟಿದ್ದಾರೆ. ಇದು ಕೆ.ಆರ್.ಪ್ರದೀಪ್ ಅವರ ಶೈಕ್ಷಣಿಕ ಸಾಧನೆಗೆ ಹಿಡಿದ ಕನ್ನಡಿ.

ಮೊದಲ ಪುಟದಿಂದ

ಎಸ್‌ಐಆರ್ ನೆರವಿಗೆ ಪಿಆರ್‌ಸಿ

ಸಲ್ಲಿಸಲು ಸಾಧ್ಯವಾಗದವರಿಗೆ ಪಿಆರ್‌ಸಿ ಸಹಕಾರಿಯಾಗಲಿದೆ. ಈ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕದಲ್ಲಿ ಜನಿಸಿರುವ ಆಧಾರದ ಮೇಲೆ ಶಾಶ್ವತ ನಿವಾಸಿ ಪ್ರಮಾಣಪತ್ರ (ಪಿಆರ್‌ಸಿ) ನೀಡಲು ಸರ್ಕಾರ ತೀರ್ಮಾನಿಸಿದೆ. 2002ರ ಮತದಾರರ ಪಟ್ಟಿಯ ವಿವರಗಳನ್ನು ಕೇಳಲಾಗಿದೆ. ಸುಮಾರು 50ರಿಂದ 60 ಶೇಕಡಾ ಜನರ ಬಳಿ ಆ ದಾಖಲೆಗಳು ಇರಬಹುದು. ಇಲ್ಲದವರಿಗೆ ಪಿಆರ್‌ಸಿ ಉಪಯೋಗವಾಗಲಿದೆ. ಈ ಹಿಂದೆಯೂ ತಹಶೀಲ್ದಾರರು ಜಾತಿ ಪ್ರಮಾಣಪತ್ರ ನೀಡುತ್ತಿದ್ದರು. ಈಗ ಸರ್ಕಾರ ಕೈಗೊಂಡಿರುವ ಕ್ರಮವನ್ನು ಟೀಕಿಸುವುದರಲ್ಲಿ ಅರ್ಥವಿಲ್ಲ ಎಂದು ಹೇಳಿದರು. ಅರ್ಜಿದಾರರು 10 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವುದಕ್ಕೆ ಪುರಾವೆ ನೀಡಿದರೆ ಅವರಿಗೆ ಪ್ರಮಾಣಪತ್ರ ನೀಡಲಾಗುತ್ತದೆ. ನಾವು ನಮ್ಮ ಹೆಣ್ಣುಮಕ್ಕಳನ್ನು ಬಾಂಗ್ಲಾದೇಶದವರಿಗೆ ಮದುವೆ ಮಾಡಿಕೊಡುತ್ತೇವೆಯೇ? ಇಲ್ಲ. ನಾವು ಕೇಂದ್ರ ಸರ್ಕಾರದ ವಿರುದ್ಧ ಏನನ್ನೂ ಮಾಡುತ್ತಿಲ್ಲ. ಯಾವುದೇ ಕಾನೂನನ್ನೂ ಉಲ್ಲಂಘಿಸುತ್ತಿಲ್ಲ. ಕಾನೂನಿನ ಪ್ರಕಾರವೇ ಎಲ್ಲವೂ ನಡೆಯುತ್ತಿದೆ ಎಂದು ಹೇಳಿದರು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಬಿಜೆಪಿ, ಈ ಕ್ರಮವು ಸಾಂವಿಧಾನಿಕ ಮಿತಿಯನ್ನು ಮೀರುವಂತದೆ ಎಂದು ಆರೋಪಿಸಿದೆ. ಇದರ ಗಂಭೀರ ಪರಿಣಾಮಗಳು ಉಂಟಾಗಬಹುದು ಎಂದು ಎಚ್ಚರಿಸಿದೆ.

ಪತ್ನಿ, ಇಬ್ಬರು ಪುತ್ರಿಯರನ್ನು ಕೊಲೆ ಮಾಡಿ ಪತಿ ಆತ್ಮಹತ್ಯೆ

ಹುಣಸೂರು ನಗರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮನೆಯಲ್ಲಿ ಡೆತ್‌ನೋಟ್ ಕೂಡ ಪತ್ತೆಯಾಗಿದೆ. ಅದರಲ್ಲಿ ನಾನು ಮೇಲಿನ ಮಹಡಿಯ ಕೋಣೆಯಲ್ಲಿ ನೇಣು ಬಿಗಿದುಕೊಂಡಿದ್ದೇನೆ ಹರೀಶ್ ಬರೆದಿದ್ದಾನೆ. ಸಾಲದ ಒತ್ತಡ ಹಾಗೂ ಆಸ್ತಿ ಸಂಬಂಧ ಕೆಲವು ವಿವರಗಳನ್ನು ಬರೆದಿರುವುದು ಬೆಳಕಿಗೆ ಬಂದಿದೆ. ಜೊತೆಗೆ ಎಲ್ಲಾ ದಾಖಲೆಗಳು ಲಾಕರ್‌ನಲ್ಲಿ ಇವೆ ಎಂದು ಹರೀಶ್ ಉಲ್ಲೇಖಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಸುಮಾರು 14 ವರ್ಷಗಳ ಹಿಂದೆ ಹರೀಶ್ ಮತ್ತು ನಿಶ್ಚಿತ ವಿವಾಹವಾಗಿದ್ದರು. ಕುಟುಂಬದೊಂದಿಗೆ ಹರೀಶ್ ತಾಯಿಯೂ ವಾಸವಾಗಿದ್ದರು. ಆದರೆ ಘಟನೆಗೆ ಎರಡು ದಿನ ಮೊದಲು ಅವರು ಪ್ರವಾಸಕ್ಕೆ ತೆರಳಿದ್ದರಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ. ಸದ್ಯ ಘಟನೆಗೆ ನಿಖರ ಕಾರಣ ಏನು? ಕೌಟುಂಬಿಕ ಕಲಹವೇ ಅಥವಾ ಆರ್ಥಿಕ ಒತ್ತಡವೇ? ಎಂಬ ಎಲ್ಲ ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಹರೀಶ್ ಖಾಸಗಿ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಸೈಟ್ ವಿಚಾರದಲ್ಲಿ ಸಾಲ ಹೆಚ್ಚಾಗಿದ್ದ ಬಗ್ಗೆ ಡೆತ್‌ನೋಟ್‌ನಲ್ಲಿ ಉಲ್ಲೇಖವಿದೆ. ಅವರ ಹೆಸರಿನಲ್ಲಿ ಮೂರು ಸೈಟ್, ಸ್ವಂತ ಮನೆ ಮತ್ತು ಕಾರು ಇದೆ. ಅವುಗಳನ್ನು ಯಾರಿಗೆ ನೀಡಬೇಕು ಎಂಬುದನ್ನೂ ಬರೆದಿದ್ದಾರೆ ಎಂದು ಮಾಹಿತಿ ನೀಡಿದರು.

ಆರ್‌ಎಸ್‌ಎಸ್ ಅವಹೇಳನ: ಪ್ರಿಯಾಂಕ್‌ಗೆ ಮತ್ತೆ ನೋಟಿಸ್

ಹಾಜರಾತಿಗೆ ಕೋರ್ಟ್ ಸೂಚಿಸಿತ್ತು. ಆದರೆ ಇವರ ಬದಲಾಗಿ ಸದಾಶಿವನಗರ ಪೊಲೀಸರು, ಅಶೋಕ್ ನಗರ ಪೊಲೀಸರು ಹಾಜರಾಗಿ ನ್ಯಾಯಾಲಯಕ್ಕೆ ವರದಿ ಸಲ್ಲಿಕೆ ಮಾಡಿದ್ದರು. ವರದಿ ಪರಿಶೀಲನೆ ನಡೆಸಿದ ನ್ಯಾಯಾಧೀಶರು ವರದಿ ತೃಪ್ತಿಕರವಾಗಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿ, ಗೃಹಸಚಿವ ಪ್ರಿಯಾಂಕ್ ಖರ್ಗೆ, ಮಹಮ್ಮದ್ ನಲಪಾಡ್ ಆಗಸ್ಟ್ 1ರಂದು ಕೋರ್ಟ್ಗೆ ಹಾಜರಾಗುವಂತೆ ಮರು ಸಮನ್ಸ್ ಜಾರಿ ಮಾಡಿದೆ.\

ಕೊಡಗಿನಲ್ಲಿ ಮಳೆ: ಹಾರಂಗಿ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಅಧಿಕಾರಿಗಳು ತಿಳಿಸಿದ್ದಾರೆ.

ಮಳೆ ಕೊರತೆಯಿಂದ ಈ ಬಾರಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂಬ ಆತಂಕ ಕಾವೇರಿ ಜಲಾನಯನ ಪ್ರದೇಶದ ಜನರಲ್ಲಿ ಮನೆ ಮಾಡಿದೆ.

ಭೀಕರ ಅಪಘಾತ: ತಂದೆ-ಮಗಳು ಸಾವು

ಹಿಂಬದಿಯಿಂದ ವೇಗವಾಗಿ ಬಂದ ಲಾರಿ ಟ್ರ್ಯಾಕ್ಟರ್‌ಗೆ ಗುದ್ದಿದೆ. ಈ ಸಂಬಂಧ ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೆಹಲಿಗೆ ಒಟ್ಟಿಗೆ ಹಾರಿದ ಡಿಕೆಶಿ, ಸಿದ್ದು, ಬಿಕೆಎಚ್

ನಡೆಯುತ್ತಿದೆ. ಎರಡನೇ ಹಂತದಲ್ಲಿ ಸಂಪುಟ ಸೇರುವ ಸಚಿವರ ಪಟ್ಟಿಯನ್ನು ಅಂತಿಗೊಳಿಸಲಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ, ಎಐಸಿಸಿ ಪ್ರಧಾನಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಸೂಚನೆಯ ಮೇರೆಗೆ ಈ ಮೂವರು ನಾಯಕರು ದೆಹಲಿ ಹೋಗಿದ್ದಾರೆ.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ. ಮೂರ್ನಾಲ್ಕು ಹಿರಿಯ ಸಚಿವರು ಸಂಪುಟದಲ್ಲಿ ಇರಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೂಚಿಸಿರುವ ಹಿನ್ನಲೆಯಲ್ಲಿ, ಹೊಸ ಪಟ್ಟಿಯೊಂದಿಗೆ, ಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಗೆ ಪ್ರಯಾಣಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಬಿಪಿಎಲ್ ಹಿಂದಿರುಗಲು ವಿಳಂಬ ಬೇಡ

ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಸೂಚನೆ

ಮೈಸೂರು: ಅರ್ಹರ ಬಿಪಿಎಲ್ ಕಾರ್ಡ್ ಮರಳಿ ನೀಡುವ ಸಂಬಂಧ ಶೀಘ್ರ ಸ್ಪಂದಿಸಿ, ಅನೇಕ ಪ್ರಕರಣಗಳಲ್ಲಿ ನಾವೇ ಹೇಳಿದರೂ ವಿಳಂಬ ಆಗುತ್ತಿದ್ದು, ಯಾವುದೇ ಕಾರಣ ಹೇಳಿ ವಿಳಂಬ ಮಾಡಬಾರದು ಎಂದು ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್. ಅರುಣ್‌ಕುಮಾರ್ ಸೂಚಿಸಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಅಬ್ದುಲ್ ನಾಜೀಬ್ ಸಬ್ ಸಭಾಂಗಣದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಜಿಲ್ಲೆಯಲ್ಲಿ 23ಸಾವಿರ ಬಿಪಿಎಲ್ ಕಾರ್ಡ್ ಗಳನ್ನು ನಾನಾ ಕಾರಣಗಳಿಂದ ಎಪಿಎಲ್ ಮಾಡಿದ್ದಿರಿ. ಆದರೆ, ಅದರಲ್ಲಿ ಅನೇಕರು ಅರ್ಹರು ಇದ್ದಾರೆ. ಅಂತಹವರ ಮನವಿಗೂ ಶೀಘ್ರ ಸ್ಪಂದಿಸುವ ಕೆಲಸ ಮಾಡಬೇಕು. ಅನೇಕರು ನಮ್ಮ ಬಳಿಗೆ ಬರುತ್ತಿದ್ದು, ಅಂತವರಿಗೂ ಮೂರು ತಿಂಗಳು ಸತಾಯಿಸಲಾಗುತ್ತಿದೆ. ಹೀಗಾಗಿ ಅರ್ಹರಿಗೆ ಎಪಿಎಲ್ ಕಾರ್ಡ್ ನೀಡುವ ನಿಟ್ಟಿನಲ್ಲಿ ಶೀಘ್ರ ಸ್ಪಂದಿಸುವ ಕೆಲಸ ಮಾಡಬೇಕು. ಅಲ್ಲದೆ, ಅರ್ಹರು ಮರಳಿ ಕಾರ್ಡ್ ಪಡೆಯುವ ಬಗ್ಗೆ ಇಲಾಖೆಯಿಂದ ಹೆಚ್ಚಿನ ಜಾಗೃತಿ ಮೂಡಿಸಬೇಕು. ಜತೆಗೆ ಆರೋಗ್ಯ ತುರ್ತು ಇರುವವರಿಗೆ ಯಾವುದೇ ಕಾರಣ ಹೇಳದೇ ನಿಮ್ಮ ಲಾಗಿನ್ ಮೂಲಕ ಸ್ಪಂದಿಸಿ ಎಂದರು.

13 ತಿಂಗಳಿಂದ ನಿಂತ ಯುವವಧಿ

ಸ.ರ.ಯೋಗೇಶ್ ಮಾತನಾಡಿ ಕಳೆದ 13ತಿಂಗಳಿಂದ ಯುವನಿಧಿ ಅನುಷ್ಠಾನ ಸಂಪೂರ್ಣ ನಿಂತು ಹೋಗಿದೆ. ಹಿಂದೆ ಮಹಾರಾಣಿ ಕಾಲೇಜಿನಲ್ಲಿ ಕಾರ್ಯಕ್ರಮ ಮಾಡಿದ್ದು ಬಿಟ್ಟರೆ ಇದುವರೆವಿಗೂ ಅದರ ಪ್ರಗತಿ ಆಗಿಲ್ಲ. ಪ್ರತಿ ಸಭೆಗೊಬ್ಬ ಅಧಿಕಾರಿ ಬಂದರೆ ಅವರಿಗೆ ಸಮಸ್ಯೆ ಹೇಳುವುದೇಗೆಂದು ಪ್ರಶ್ನಿಸಿದರು. ಇದಕ್ಕೆ ದನಿಗೂಡಿಸಿದ ಅಧ್ಯಕ್ಷ ಹಿಂದಿನ ಸಭೆಯಲ್ಲಿದ್ದ ಅಧಿಕಾರಿಗಳು ತರಬೇತಿಗೆ ಯುವಕರು ಬರುತ್ತಿಲ್ಲ ಎಂದಿದ್ದರೂ ಈಗ ನೀವು ಬಂದಿದ್ದೀರಿ ಹೀಗಾದರೆ ಇದನ್ನು ಕಾರ್ಯಗತ ಮಾಡುವುದೇ ಗೆಂದು ಪ್ರಶ್ನಿಸಿದರು. ಜತೆಗೆ ಪ್ರತಿ ತಾಲ್ಲೂಕು ಮಟ್ಟದ ಕಾಲೇಜುಗಳಲ್ಲಿಯೂ

ಯುವನಿಧಿ ಜಾಗೃತಿ ಮೂಡಿಸಿ ಹಾಗೂ ಈ ತಿಂಗಳಲ್ಲಿ ದೊಡ್ಡ ದೊಡ್ಡ ಕಾಲೇಜುಗಳೊಂದಿಗೆ ಚರ್ಚಿಸಿ ಯುವನಿಧಿ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಿ ವರದಿ ನೀಡುವಂತೆ ತಾಕೀತು ಮಾಡಿದರು.

ಸತ್ತಿಲ್ಲ ಬದುಕಿದ್ದಾರೆ

ಕೆಲವೊಬ್ಬ ಅಧಿಕಾರಿಗಳ ಯಡವಟ್ಟಿನಿಂದ ಬದುಕಿರುವವರನ್ನು ಸಾಯಿಸಿದ ಘಟನೆ ಸಭೆಯಲ್ಲಿ ಬೆಳಕಿಗೆ ಬಂದಿತು. ಗ್ಯಾರೆಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷ ಶಿವಕುಮಾರ್ ಮಾತನಾಡಿ, ವೃದ್ಧೆಯೊಬ್ಬರಿಗೆ ಗ್ರಾಪಂ ಅಧಿಕಾರಿಯೂ ಬದುಕಿರುವಾಗಲೇ ಮರಣ ಪ್ರಮಾಣ ಪತ್ರ ನೀಡಿದ್ದರಿಂದ ಗೃಹಲಕ್ಷ್ಮಿ ಪಡಿತರ ಮಾತ್ರವಲ್ಲದೆ ಪಿಂಚಣಿಯೂ ನಿಂತಿದೆ. ಈ ಬಗ್ಗೆ ಸಮಸ್ಯೆ ಅಧಿಕಾರಿಗಳ ಗಮನಕ್ಕೆ ತಂದರೂ ಪರಿಹಾರ ಸಿಗುತ್ತಿಲ್ಲವೆಂದು ದೂರಿದರು. ಇದಕ್ಕೆ ದನಿಗೂಡಿಸಿದ ಮತ್ತೋರ್ವ ಸಮಿತಿ ಸದಸ್ಯ ಉತ್ತನಹಳ್ಳಿ ಮಹದೇವು ಪಿರಿಯಾಪಟ್ಟಣ ಕಾಳಮ್ಮ ಬೋರಯ್ಯ ಅವರಿಗೂ ಹೀಗೆ ಮಾಡಿ ಸರ್ಕಾರದ ಸೌಲಭ್ಯಗಳು ನಿಂತಿವೆ ಎಂದು ದೂರಿದರು. ಸಮಿತಿ ಸದಸ್ಯರು ಸತ್ತಿರುವವರ ಖಾತೆಗೆ ಹಣ ಹೋಗುವುದು ಎಷ್ಟು ದೊಡ್ಡ ಪ್ರಮಾದವೋ ಅಷ್ಟೇ ಪ್ರಮಾದ ಬದುಕಿರುವವರಿಗೂ ಮರಣ ಪತ್ರ ನೀಡಿ ಸೌಲಭ್ಯ ಕಡಿತಗೊಳಿಸುವುದಾಗಿದೆಂದರು. ಕೊನೆಗೆ ಸಿಇಒ ಯುಕೇಶ್ ಕುಮಾರ್ ಇದು ಗಂಭೀರ ಪ್ರಕರಣಗಳಾಗಿದ್ದು, ಇಂತಹವನ್ನು ಗಮನಕ್ಕೆ ತಂದರೆ ಜಿಲ್ಲಾಧಿಕಾರಿಗಳ ಮೂಲಕ ಸಮಸ್ಯೆ ಇತ್ಯರ್ಥ ಪಡಿಸುವುದಾಗಿ ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ನಾಗರಾಜು ಮಾತನಾಡಿ, ಕಳೆದ ಮೂರು ವರ್ಷದಲ್ಲಿ ಜಿಲ್ಲೆಯಲ್ಲಿ 15724 ಮಂದಿ ಗೃಹಲಕ್ಷ್ಮಿ ಫಲಾನುಭವಿಗಳು ಮರಣಹೊಂದಿದ್ದು, 5505ಮಂದಿ ಖಾತೆಗೆ 7210841 ಹಣ ಜಮೆ ಆಗಿದ್ದು, ಅದನ್ನು ಮರಳಿ ಪಡೆಯುವ ನಿಟ್ಟಿನಲ್ಲಿ ಚರ್ಚೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಉಪಾಧ್ಯಕ್ಷರಾದ ಹುಣಸೂರು ಬಸವಣ್ಣ, ಬಿ.ಎನ್.ಕರಿಗೌಡ,

ಯುಪಿಎಸ್ಸಿ ಆಳವಾದ ಜ್ಞಾನ, ಕುತೂಹಲ ವಿರಲಿ

ಮೈಸೂರು: ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆ ಪಾಸು ಮಾಡಲು ಆಳವಾದ ಜ್ಞಾನ ಆಸಕ್ತಿ ಮತ್ತು ಎಲ್ಲಾ ವಿಷಯಗಳ ಬಗ್ಗೆ ಕುತೂಹಲ ಇರಬೇಕು ಎಂದು ಬೆಂಗಳೂರಿನ ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಹೇಳಿದರು.

ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಕನ್ನಡ ವಿಭಾಗ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಮಂಗಳವಾರ ಏರ್ಪಡಿಸಿದ್ದ ಪ್ರಾಂಶುಪಾಲ ಪ್ರೊ. ಎಸ್.ಮಹದೇವಮೂರ್ತಿ ಅವರಿಗೆ ಅಭಿನಂದನೆ ಸಮಾರಂಭದಲ್ಲಿ ಐಎಎಸ್, ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಸಿದ್ಧತೆ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಪ್ರತಿಷ್ಠೆ, ಪೋಷಕರ ಕನಸು ಹಾಗೂ ತಾನು ಬೆಳೆದ ಬಂದ ಬಡತನದ ಬಗ್ಗೆ ಜಾಗೃತಿ ಉಂಟಾಗಿ ಈ ರೀತಿಯ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಆದರೆ ಗಟ್ಟಿಯಾದ ಮನಸ್ಸು, ಆತ್ಮವಿಶ್ವಾಸ ಹಾಗೂ ಸಾಮರ್ಥ್ಯ ಇಲ್ಲದಿದ್ದರೆ ಪಾಸು ಮಾಡುವುದು ಕಷ್ಟ ಎಂದರು.

ಇತ್ತೀಚಿನ ದಿನಗಳಲ್ಲಿ ನಮ್ಮ ಯುವಕರು ಅಲ್ಪತೃಪ್ತರಾಗುತ್ತಿದ್ದಾರೆ. ಯಾವುದಾದರೂ ಸರ್ಕಾರಿ ಕೆಲಸ ಸಿಕ್ಕಿದ ತಕ್ಷಣ ಅಲ್ಪತೃಪ್ತರಾಗುತ್ತಾರೆ. ಇದನ್ನು ಬಿಟ್ಟು ದೊಡ್ಡ ದೊಡ್ಡ ಕನಸು ಕಾಣಬೇಕು. ಐಎಎಸ್ ಗುರಿ ಇಟ್ಟುಕೊಂಡರೆ ಕನಿಷ್ಠ ಕೆಎಎಸ್ ಆದರೂ ಪಾಸಾಗುತ್ತದೆ. ಐಎಎಸ್ ಪರೀಕ್ಷೆ

ಪಾಸು ಮಾಡಿದ ನಂತರ ಐವರು ತಜ್ಞರ ಮುಂದೆ ಸಂದರ್ಶನ ಎದುರಿಸಬೇಕು. ಆ ಅರ್ಧತಾಸು ನೀವು ತೋರಿಸುವ ಆತ್ಮವಿಶ್ವಾಸ ನಿಮ್ಮ ಗುರಿತಲುಪಿಸಲು ನೆರವಾಗುತ್ತದೆ. ಅಲ್ಲಿ ಪಾಸಾದರೆ ದೇಶಕ್ಕೆ, ಸಮಾಜಕ್ಕೆ, ಬಡವರಿಗೆ ತಮ್ಮ ಸೇವಾವಧಿಯಲ್ಲಿ ಒಳ್ಳೆಯದು ಮಾಡುವ ಅವಕಾಶ ಸಿಗುತ್ತದೆ ಎಂದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮಹದೇವಮೂರ್ತಿ ಮಾತನಾಡಿದರು. ಇದೇ ತಿಂಗಳು ನಿವೃತ್ತರಾಗಲಿರುವ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಭದ್ರೇಗೌಡರನ್ನು ಸಹ ಸನ್ಮಾನಿಸಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಆಡಳಿತಾಧಿಕಾರಿ ಪ್ರೊ.ಎಚ್.ಎಸ್.ಜಯಂತ್ ಮಾತನಾಡಿದರು. ಪ್ರೊ.ಸುಮಂಗಲಾ ಮಹದೇವಮೂರ್ತಿ, ಪ್ರೊ.ಕೆ. ಅಜಯ್ ಕುಮಾರ್, ಪ್ರೊ.ಎಂ.ಎಸ್. ವಸಂತ, ಪ್ರೊ.ಎಚ್. ಅನ್ನಪೂರ್ಣ, ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಡಾ.ಎಂ.ಕೆ. ಗಿರೀಶ್ ಚಂದ್ರ ಇದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ..ಸಿ.ಡಿ. ಪರಶುರಾಮ ಸ್ವಾಗತಿಸಿ. ಪ್ರಾಸ್ತಾವಿಕ ಭಾಷಣ ಮಾಡಿದರು.

ಲಾಠಿ ಚಾರ್ಜ್‌ಗೆ ವೇದಿಕೆ ಖಂಡನೆ

ಮೈಸೂರು: ದೆಹಲಿಯಲ್ಲಿ ನೀಟ್ ಪರೀಕ್ಷೆ ಹಾಗೂ ಪರೀಕ್ಷಾ ಅಕ್ರಮಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರ ಲಾಠಿದಾಳಿ ಮತ್ತು ಹಲ್ಲೆಯನ್ನು ಖಂಡಿಸಿ ಕನ್ನಡಾಂಬೆ ರಕ್ಷಣಾ ವೇದಿಕೆವತಿಯಿಂದ ನಗರದ ಹಳೆಯ ಡಿಸಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಮಾತನಾಡಿದ ಕನ್ನಡಾಂಬೆ ರಕ್ಷಣಾ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ರಾಜ ಶೇಖರ್ ಮಾತನಾಡಿ, "ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳು, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿನ ಅವ್ಯವಸ್ಥೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಸಂಕಷ್ಟಕ್ಕೀಡಾಗಿದೆ. ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಅಮಾನವೀಯವಾಗಿ ಲಾಠಿ ಪ್ರಹಾರ ನಡೆಸಿರುವುದು ಅತ್ಯಂತ ಖಂಡನೀಯ. ಪ್ರತಿಭಟನಾ ಕಾರರು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕೂಡಲೇ ಅಮಾನತು ಮಾಡಿ, ಅವರ ವಿರುದ್ಧ ಕಠಿಣ ಶಿಸ್ತು ಹಾಗೂ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ರಾಜಶೇಖರ್, ರಾಜ್ಯ ಖಜಾಂಚಿ ನಂಜುಂಡ, ಮಹಿಳಾ ಘಟಕದ ಅಧ್ಯಕ್ಷ ವತ್ಸಲ, ರಶ್ಮಿ ಸಿಂಗ್, ಶಶಿಕಲಾ, ರಾಧಾ, ಗಂಗಾಧರ್, ಕಾವ್ಯ, ಪವನ್, ನಿತಿನ್, ನಾಗರಾಜ್, ಸಿಂಧುವಳ್ಳಿ ಶಿವಕುಮಾರ್, ಮಹೇಂದ್ರ, ಮೈಸೂರು ಹೃದಯವಂತ ಕನ್ನಡಿಗರ ಬಳಗದ ಅಧ್ಯಕ್ಷ ಡಿಪಿಕೆ ಪರಮೇಶ್, ನಗರ ಅಧ್ಯಕ್ಷ ಹೊನ್ನೇಗೌಡ, ಪರಿಸರ ವಾದಿಗಳಾದ ಭಾನು ಮೋಹನ್, ಹರೀಶ, ನಾಗರಾಜ್, ಮೋಹನ್, ವಿಷ್ಣು ಇತರರು ಇದ್ದರು.

ಸಾಮೂಹಿಕ ಅತ್ಯಾಚಾರ: ಮೂವರ ಬಂಧನ

ಮೈಸೂರು: ಪಶ್ಚಿಮ ಬಂಗಾಳ ಮೂಲದ 30 ವರ್ಷದ ಯುವತಿಯನ್ನು ಅಪಹರಿಸಿ ಅತ್ಯಾಚಾರ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿರುವುದಾಗಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ತಿ.ನರಸೀಪುರ ಪಟ್ಟಣದ ಕಿರಣ್ ಅಲಿಯಾಸ್ ಹುಚ್ಚ, ರಿಹಾನ್‌ಖಾನ್, ಕಿಶೋರ್ ಕುಮಾರ್ ಬಂಧಿತರಾಗಿದ್ದು, ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಅಲ್ಲದೆ, ಅಪಹರಣ ಕೃತ್ಯಕ್ಕೆ ಬಳಸಿದ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಹೊರರಾಜ್ಯದ 30 ವರ್ಷ ವಯಸ್ಸಿನ ಯುವತಿಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ 24 ಗಂಟೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಈ ಬಗ್ಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತದೆ. ತನಿಖೆಯ ವೇಳೆ ಹಿಂದಿಯಲ್ಲಿ ಮಾತನಾಡಿದ್ದಾರೆ ಎನ್ನಲಾದ ಆಡಿಯೋವೊಂದು ಪತ್ತೆಯಾಗಿದ್ದು, ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ. ನೊಂದ ಯುವತಿ ಹಾಗೂ ಆರೋಪಿತರು ಡ್ರಗ್ಸ್ ಸೇವನೆ ಮಾಡಿಲ್ಲ ಎಂಬುವುದು ಕೂಡ ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಆದರೂ, ಪರೀಕ್ಷೆ ಮಾಡಿಸಲಾಗಿದೆ. ಯುವತಿಯನ್ನು ಕಿಡ್ನ್ಯಾಪ್ ಮಾಡಿದವರು ಪರಿಚಿತರಲ್ಲ. ಎಲ್ಲರೂ ಅಪರಿಚಿತರೇ. ದೂರು ಹಿನ್ನೆಲೆ ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ಮಹಿಳೆ ತಿ.ನರಸೀಪುರ ಪಟ್ಟಣದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದು, ನಗರದಲ್ಲಿ ಚಾಟ್ ಸೆಂಟರ್ ಅಲ್ಲಿ ಕಳೆದ ಮೂರು ತಿಂಗಳಿಂದ ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ ಸ್ನೇಹಿತರ ಮನೆಗೆ ಹುಟ್ಟುಹಬ್ಬ ಆಚರಣೆಗಾಗಿ ಹೋಗಿ ನಂತರ ಯುವತಿ ವಾಪಸ್ ಬರುವಾಗ ಈ ಘಟನೆ ನಡೆದಿದೆ.

ಕಾರಿನಲ್ಲಿ ಬಂದ ಮೂವರು ವಿಳಾಸ ಕೇಳುವ ನೆಪದಲ್ಲಿ ನನ್ನ ಹತ್ತಿರ ಬಂದು, ಬಳಿಕ ತನ್ನನ್ನು ಅಪಹರಿಸಿ, ತಿ. ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಬಳಿಯ ಲಾಡ್ಜ್‌ಗೆ ಕರೆದೊಯ್ದು ಸಾಮೂಹಿಕವಾಗಿ ಅತ್ಯಾಚಾರವೆಸಗಿದ್ದಾರೆ. ಅಲ್ಲದೇ ನನ್ನ ಮೇಲೆ ಹಲ್ಲೆ ನಡೆಸಿ ನನ್ನ ಬಳಿ ಇದ್ದ ಮೊಬೈಲ್ ಮತ್ತು 5 ಸಾವಿರ ರೂ. ಕಿತ್ತುಕೊಂಡಿದ್ದಾರೆ ಎಂದು ಯುವತಿ ದೂರು ನೀಡಿದ್ದಾರೆ. ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಯನ್ನು ಲಾಡ್ಜ್‌ವೊಂದರ ಕೊಠಡಿಯಲ್ಲಿ ಕೂಡಿಹಾಕಿ ಲೈಂಗಿಕ ದೌರ್ಜನ್ಯ ನಡೆಸಿದ್ದರು. ನಂತರ ಸಂತ್ರಸ್ತೆಯ ಬಳಿ ಇದ್ದ ಎರಡು ಮೊಬೈಲ್ ಮತ್ತು 5 ಸಾವಿರ ರೂ. ಕಿತ್ತುಕೊಂಡು, 1 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆಗ ಮಹಿಳೆಯು ಹಣ ಮನೆಯಲ್ಲಿದ್ದು, ನನ್ನನ್ನು ಮನೆಗೆ ಕರೆದೊಯ್ದರೆ ಹಣ ನೀಡುವುದಾಗಿ ತಿಳಿಸಿದ್ದರು. ನಂತರ ಆರೋಪಿಗಳು, ಮಹಿಳೆಯನ್ನು ಅದೇ ಕಾರಿನಲ್ಲಿ ಮನೆಗೆ ಕರೆದುಕೊಂಡು ಬಂದಿದ್ದರು. ಕಾರಿನಿಂದ ಇಳಿದು ತಕ್ಷಣವೇ ಮನೆಯೊಳಗೆ ಹೋಗಿ ಸಂತ್ರಸ್ತೆ ಬಾಗಿಲು ಹಾಕಿಕೊಂಡಿದ್ದಳು. ನಂತರ ಸಹಾಯಕ್ಕಾಗಿ ಮನೆ ಮಾಲೀಕರು ಮತ್ತು ಅಕ್ಕಪಕ್ಕದವರನ್ನು ಕೂಗಿದ್ದರಿಂದ ಆರೋಪಿಗಳು ಪರಾರಿಯಾಗಿದ್ದರು. ತಕ್ಷಣ ಮನೆಯ ಮಾಲೀಕರ ಸಹಾಯದಿಂದ ಪೊಲೀಸರಿಗೆ ಮಾಹಿತಿ ಮುಟ್ಟಿಸಿ, ನಂತರ ಮಹಿಳಾ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಗೃಹಜ್ಯೋತಿ ಪೂರ್ಣಗೊಳಿಸಿ

ಪರಿಶೀಲನೆ ಪೂರ್ಣಗೊಳಿಸಲು ಸೂಚನೆ | ಪ್ರಗತಿ ಪರಿಶೀಲನಾ ಸಭೆ

ಚಾಮರಾಜನಗರ: ರಾಜ್ಯ ಸರ್ಕಾರದ ಆದೇಶದಂತೆ ಗೃಹ ಜ್ಯೋತಿಯ ಫಲಾನುಭವಿಗಳ ಪರಿಶೀಲನಾ ಪ್ರಕ್ರಿಯೆಯನ್ನು ಮತ್ತಷ್ಟು ಚುರುಕುಗೊಳಿಸಿ, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೊಂಗನೂರು ಎಚ್.ವಿ. ಚಂದ್ರು ತಿಳಿಸಿದರು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸೆಸ್ಕಾಂ ವಿಭಾಗೀಯ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ಯಾರಂಟಿ ಸಮಿತಿ ಸದಸ್ಯರ ಸಹಕಾರ ಪಡೆಯಿರಿ

ಪಂಚ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮತ್ತು ತಾಲೂಕು ಅನುಷ್ಠಾನ ಸಮಿತಿಗಳು ರಚನೆಯಾಗಿದ್ದು, ಆಯಾ ವ್ಯಾಪ್ತಿಯ ಸೆಸ್ಕಾಂ ಅಧಿಕಾರಿಗಳು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸೂಕ್ತ ಮಾಹಿತಿ ನೀಡಬೇಕು. ಸಮಿತಿ ಸದಸ್ಯರು ಪರಿಶೀಲನಾ ಸ್ಥಳಕ್ಕೆ ಆಗಮಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರಿಂದ ಪರಿಶೀಲನೆ ಸುಗಮವಾಗಿ ನಡೆಯಲು ಅನುಕೂಲವಾಗುತ್ತದೆ. ಈ ಸಭೆಯಲ್ಲಿ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಚಾಮರಾಜನಗರದ ನಲ್ಲೂರು ಸೋಮೇಶ್ವರ್, ಕೊಳ್ಳೇಗಾಲದ ರಾಜೇಂದ್ರ, ಯಳಂದೂರಿನ ಪ್ರಭುಪ್ರಸಾದ್, ಹನೂರಿನ ರಾಜಪ್ಪ, ಗುಂಡ್ಲುಪೇಟೆಯ ತೆರಕಣಾಂಬಿ ರವಿ, ಕೊಳ್ಳೇಗಾಲ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ತಬಸ್ಸಮ್ ಅಫ್ತಾಬಾನು ಹಾಗೂ ವಿವಿಧ ಉಪ ವಿಭಾಗಗಳ ಇಂಜಿನಿಯರ್ಗಳು ಉಪಸ್ಥಿತರಿದ್ದರು.

ಯೋಜನೆ ಅನುಷ್ಠಾನ ಹಾಗೂ ಸಮೀಕ್ಷೆಯ ಉದ್ದೇಶ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಣೆ ಮಾಡಿರುವ ಗೃಹ ಜ್ಯೋತಿ ಯೋಜನೆಯು ಬಡ ಜನರಿಗೆ ಅನುಕೂಲಕರವಾಗಿದೆ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಶೇಷ ಕಾರ್ಯಯೋಜನೆ ರೂಪಿಸಿದ್ದಾರೆ. ಗೃಹ ಜ್ಯೋತಿ ಫಲಾನುಭವಿಗಳ ನಿಖರವಾದ ಪಟ್ಟಿ ತಯಾರಿಸುವುದು, ಉಚಿತ ವಿದ್ಯುತ್ ಯೋಜನೆ ಬಗ್ಗೆ ಸಾರ್ವಜನಿಕರಲ್ಲಿ ಮನವರಿಕೆ ಮಾಡಿಕೊಡುವುದು ಹಾಗೂ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಗೆ ಅನುಗುಣವಾಗಿ ಸೂಕ್ತ ಕಾರ್ಯಯೋಜನೆ ಸಿದ್ಧಪಡಿಸುವುದು ಈ ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ.

ಪರಿಶೀಲನಾ ಕಾರ್ಯಕ್ಕೆ ಸೆಸ್ಕಾಂ ಸಿಬ್ಬಂದಿ ಸ್ಪಂದನೆ

ಸಭೆಯಲ್ಲಿ ಮಾತನಾಡಿದ ಸೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರದೀಪ್, ಕೊಳ್ಳೇಗಾಲ ಹಾಗೂ ಚಾಮರಾಜನಗರ ವಿಭಾಗ ವ್ಯಾಪ್ತಿಯಲ್ಲಿ ಗೃಹ ಜ್ಯೋತಿ ಪರಿಶೀಲನೆ ವೇಗವಾಗಿ ನಡೆಯುತ್ತಿದೆ ಎಂದು ತಿಳಿಸಿದರು. ತುರ್ತು ಸಂದರ್ಭಗಳನ್ನು ಹೊರತುಪಡಿಸಿ, ಸಿಬ್ಬಂದಿ ದಿನಕ್ಕೆ ಹೆಚ್ಚುವರಿಯಾಗಿ ಎರಡು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದು, ಸಾರ್ವಜನಿಕರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ವಿವರಿಸಿದರು.

ಚಾಮರಾಜನಗರ ರಾಜ್ಯಕ್ಕೇ ಪ್ರಥಮ ಸ್ಥಾನದಲ್ಲಿರಲಿ

ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನದಲ್ಲಿ ಚಾಮರಾಜನಗರ ಜಿಲ್ಲೆಯು ರಾಜ್ಯದಲ್ಲಿ ಮೊದಲ ಸ್ಥಾನ ಪಡೆದುಕೊಂಡಿತ್ತು. ಅದೇ ಮಾದರಿಯಲ್ಲಿ ಗೃಹ ಜ್ಯೋತಿ ಪರಿಶೀಲನೆಯಲ್ಲೂ ನಮ್ಮ ಜಿಲ್ಲೆಯು ಮುಂಚೂಣಿಯಲ್ಲಿರಬೇಕು ಎಂದು ಚಂದ್ರು ಆಶಯ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಒಟ್ಟು 2, 00,105 ಗೃಹ ಜ್ಯೋತಿ ಫಲಾನುಭವಿಗಳಿದ್ದು, ಈಗಾಗಲೇ 65 ಸಾವಿರ ಅರ್ಜಿಗಳನ್ನು ಫಲಾನುಭವಿಗಳಿಗೆ ನೀಡಿ ಭರ್ತಿ ಮಾಡಿ ವಾಪಸ್ ಪಡೆದುಕೊಳ್ಳಲಾಗಿದೆ. ಪ್ರಸ್ತುತ ಶೇಕಡಾ 33 ರಷ್ಟು ಪ್ರಗತಿಯಾಗಿದ್ದು, ಉಳಿದ ಅವಧಿಯಲ್ಲಿ ಎಲ್ಲಾ ಮನೆ ಮನೆಗೆ ತೆರಳಿ ಶೇಕಡಾ 100 ರಷ್ಟು ಪ್ರಗತಿ ಸಾಧಿಸಲು ಸೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ

ಮೈಸೂರು: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಪುರಭವನ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ವಿವಿಧ ಘೋಷಣೆಗಳನ್ನು ಕೂಗಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ಮಾತನಾಡಿ, ನೀಟ್ ಪರೀಕ್ಷೆ ಬರೆದ 20 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳ ಪರಿಸ್ಥಿತಿ ಡೋಲಾ?ಂವಾನವಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ?ಂಗಲು ಕಾರಣರಾದವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ಹೊಸದಿಲ್ಲಿಯಲ್ಲಿ ಶಾಂತಿ??ಂತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಲಾಠಿಪ್ರಹಾರ ನಡೆಸಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ ಎಂದು ಟೀಕಿಸಿದರು. ಸೈಯದ್‌ಫಾರೂಕ್, ಎಸ್.ಎ.ರಹೀಂ, ಆರ್.ಕೆ. ರವಿ, ಪುಟ್ಟರಾಜು, ರಾಮು, ಮಂಜು, ಸುನಿಲ್ ನಾರಾಯಣ, ರಂಗಸ್ವಾಮಿ, ಕೆ.ರಾಮು, ಬಾಬು, ರವಿನಾಯಕ, ಮೋಹನ್ ಕುಮಾರ್, ಬಿ.ಜಿ.ಕೇಶವ ಇನ್ನಿತರರು ಇದ್ದರು.

ಶ್ರೀಮಂಟೇಸ್ವಾಮಿ ಕಂಡಾಯೋತ್ಸವ

ಚಾಮರಾಜನಗರ, ತಾಲೂಕಿನ ಆಲೂರುಹೊಮ್ಮ ಗ್ರಾಮದಲ್ಲಿ ನಾಯಕ ಸಮುದಾಯ ವತಿಯಿಂದ ಶ್ರೀಮಂಟೇಸ್ವಾಮಿ ಕಂಡಾಯೋತ್ಸವ ವಿಜೃಂಭಣೆಯಿಂದ ನೆರವೇರಿತು.

ಕುರುಬರಹುಂಡಿಯ ನಲ್ಲಿಮರದಕಟ್ಟೆ ಗದ್ದುಗೆಯಿಂದ ತಂದ ಕಂಡಾಯಗಳನ್ನು ಗ್ರಾಮದ ಸರ್ಕಾರಿ ಶಾಲೆಯ ಪಕ್ಕದಲ್ಲಿರುವ ಅರಳಿಕಟ್ಟೆಯ ಬಳಿಯಲ್ಲಿ ಸ್ವಚ್ಛಗೊಳಿಸಿ ವಿವಿಧ ಹೂ-ಹೊಂಬಾಳೆಯಿಂದ ಅಲಂಕರಿಸಿ ಪೂಜೆ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿ ನಾಯಕರ ಬೀದಿಯಲ್ಲಿ ಹಾಕಿದ ಹಸಿರು ಚಪ್ಪರದಲ್ಲಿ ದಡಿಯಲ್ಲಿ ಕೂರಿಸಿ ಪೂಜೆ ಸಲ್ಲಿ

ನೀಟ್ ಅಕ್ರಮ: ಕೇಂದ್ರ ಸಚಿವರ ರಾಜೀನಾಮೆಗೆ ಆಗ್ರಹ

ಮೈಸೂರು: ನೀಟ್ ಪರೀಕ್ಷೆಯ ಅಕ್ರಮದಿಂದಾಗಿ 21ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದು, ಇವರ ಸಾವಿಗೆ ಹೊಣೆಯಾರು?, ಈ ಕೂಡಲೇ ಕೇಂದ್ರ ಸಚಿವರ ರಾಜೀನಾಮೆ ಪಡೆಯಿರಿ ಎಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಮೈಸೂರು ಜಿಲ್ಲಾ ಸಂಘಟನೆ ಸಮಿತಿ ಪ್ರತಿಭಟಿಸಿತು.

ನಗರದ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದ ಸಮಿತಿಯ ಯುವಕರು ಕೇಂದ್ರ ಸರ್ಕಾರದ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಮರು ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಿದ್ದರೂ ಈವರೆಗೆ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ. ನೀಟ್ ಪರೀಕ್ಷೆ?ಂ ಪಾವಿತ್ರ್ಯ ಮತ್ತು ವಿಶ್ವಾಸಾರ್ಹತೆ ಪ್ರಶ್ನಾರ್ಥಕವಾಗಿರುವುದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ದೇಶಾದ್ಯಂತ ಸುವಾರು 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ತಮ್ಮ ವೈದ್ಯಕೀ?ಂ ಶಿಕ್ಷಣದ ಕನಸಿಗಾಗಿ ವರ್ಷಗಳ ಕಾಲ ಶ್ರಮಿಸಿದ್ದಾರೆ. ಆದರೆ, ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮಗಳು ಮತ್ತು ಪರೀಕ್ಷಾ ನಿರ್ವಹಣೆ?ಂಲ್ಲಿನ ಲೋಪಗಳಿಂದ ವಿದ್ಯಾರ್ಥಿಗಳಲ್ಲಿ ಆತಂಕ ಮತ್ತು ಅಸಮಾಧಾನ ಉಂಟಾಗಿದೆ ಎಂದು ದೂರಿದರು. ಎಸ್‌ಎಫ್‌ಐ ರಾಜ್ಯ ಕಾರ್?ದರ್ಶಿ ಟಿ.ಎಸ್.ವಿಜಯಕುಮಾರ್, ಜಿಲ್ಲಾ ಮುಖಂಡರಾದ ಜೀವನ್, ಡಿ.ಅಭಿ, ಡಿವೈಎಸ್‌ಐನ ರಾಘವೇಂದ್ರ ಇನ್ನಿತರರು ಹಾಜರಿದ್ದರು.

ನಾಳೆ ಜಗನ್ನಾಥ ರಥಯಾತ್ರೆ

ಮೈಸೂರು: ದಟ್ಟಗಳ್ಳಿಯಲ್ಲಿನ ಇಸ್ಕಾನ್ ಕೇಂದ್ರದ ವತಿಯಿಂದ ಜು.23 ರಂದು ಜಗನ್ನಾಥ ರಥಯಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರದ ಪ್ರತಿನಿಧಿ ವೇಣುಕೃಷ್ಣದಾಸ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಮಧ್ಯಾಹ್ನ 3ಕ್ಕೆ ರಥವು ದಟ್ಟಗಳ್ಳಿಯ ಪಿಕೆವಿ ಆಚಾರ್ಯ ಭವನದಿಂದ ಹೊರಟು ಆಂದೋಲನ ವೃತ್ತ, ಕುವೆಂಪುನಗರ ಶಾಂತಿಸಾಗರ್ ಕಾಂಪ್ಲೆಕ್ಸ್ ಮೂಲಕ ಆರಂಭದ ಸ್ಥಳಕ್ಕೇ ಬಂದು ತಲುಪಲಿದೆ. ಜಗನ್ನಾಥ ರಥಯಾತ್ರೆ ವಿಶ್ವದ ಅತ್ಯಂತ ಪುರಾತನ ಮತ್ತು ಅತ್ಯಂತ ಆಧ್ಯಾತ್ಮಿಕವಾದ ಮಹತ್ವದ ಉತ್ಸವಗಳಲ್ಲಿ ಒಂದಾಗಿದೆ. ಇದು ರಾಷ್ಟ್ರೀಯತೆ, ಧರ್ಮ, ಜಾತಿ ಅಥವಾ ಸಾಮಾಜಿಕ ಹಿನ್ನೆಲೆ ಲೆಕ್ಕಿಸದೇ ಜನರನ್ನು ಭಕ್ತಿಯ ಕಡೆಗೆ ಸೆಳೆಯುತ್ತದೆ. ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಇನ್ನಿತರರು ಅತಿಥಿಗಳಾಗಿರುವರೆಂದರು. ನಂದಮುಕುಂದ ಕೃಷ್ಣದಾಸ್, ರಸರಾಜ ಗೋಕುಲೇಶಪ್ರಭಾ, ಚಂಪಕಲತಾ ಸುಮುಖಿ ದೇವದಾಸಿ ಇದ್ದರು.

25ರಂದು ರವೀಂದ್ರರಾಗ ಕಾರ್ಯಕ್ರಮ

ಮೈಸೂರು: ಅನುಭೂತಿ ಮೈಸೂರು ಮತ್ತು ನಿತಿನ್ ನಾದಾಮೃತ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜು. 25ರ ಸಂಜೆ 6.30ಕ್ಕೆ ಕಲಾ ಮಂದಿರದ ಕಿರು ರಂಗ ಮಂದಿರದಲ್ಲಿ ವಿಶ್ವ ಕವಿ ರವೀಂದ್ರ ನಾಥ ಠಾಗೋರ್ ಕೃತಿ ಆಧರಿಸಿದ ರವೀಂದ್ರರಾಗ ಶೀರ್ಷಿಕೆಯ ಕಾರ್ಯ ಕ್ರಮ ಆಯೋಜಿಸಲಾಗಿದೆ ಎಂದು ಅನುಭೂತಿ ಸಂಸ್ಥೆಯ ಮುಖ್ಯಸ್ಥ ಎಂ. ಆರ್.ಶ್ರೀವಿದ್ಯಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ರವೀಂದ್ರ ನಾಥ ಠಾಗೋರ್ ಅವರ ಕಾವ್ಯ, ಗೀತೆ, ನಾಟಕ ಹಾಗೂ ಚಿಂತನೆಗಳನ್ನು ಆಧರಿಸಿದ್ದು, ಅವರ ಇಂದಿಗೂ ಮಾನವೀಯತೆ, ಪ್ರಕೃತಿ ಪ್ರೇಮ, ದೇಶಭಕ್ತಿ, ಸ್ತ್ರೀಶಕ್ತಿ ಹಾಗೂ ಚಿಂತನೆಗಳು ಪ್ರಸ್ತುತವಾಗಿವೆ. ತತ್ತ ?ವಚಿಂತನೆಯನ್ನು, ಅವರ ಸೃಜನಶೀಲತೆಯನನು ಹೊಸ ತಲೆಮಾರಿಗೆ ಪರಿಚ ಯಿಸುವ ಉದ್ದೇಶ ಹೊಂದಿದೆ. ಇದು ಕನ್ನಡ, ಬಂಗಾಳಿ ಸಂಸ್ಕೃತಿಗಳ ನಡುವಿನ ಸಾಂಸ್ಕೃತಿಕ ಸೇತುವೆಯಾಗಿದ್ದು, ವಿವಿಧ ವಯೋಮಾನದ ಕಲಾ ವಿದರ ಪಾಲ್ಗೊಳ್ಳಲಿದ್ದಾರೆ. ಠಾಗೋರರ ಮೂಲ ಚಿಂತನೆಗೆ ಯಾವುದೇ ಧಕ್ಕೆಯಾಗದಂತೆ ಸಮಕಾ ಲೀನ ಪ್ರೇಕ್ಷಕರಿಗೆ ತಲುಪಿಸುವ ಉದ್ದೇಶವಿದ್ದು, ಪ್ರವೇಶದರ 150 ರೂ. ಗಳಾಗಿವೆ. ರವೀಂದ್ರರಿಗೆ ನೊಬೆಲ್ ಪ್ರಶಸ್ತಿ ದೊರೆತು 112 ವರ್ಷ ಸಂದಿರುವ ಹಿನ್ನೆಲೆ ಇದು ವಿಶೇಷ ಕಾರ್ಯಕ್ರಮವಾಗಿದೆ ಎಂದು ಮಾಹಿತಿ ನೀಡಿದರು. ನಿತಿನ್ ರಾಜಾರಾಂ ಶಾಸ್ತ್ರಿ, ಪ್ರಭಾಕರ್‌ರಾವ್, ಶಿಲ್ಪಾ ಹಾಜರಿದ್ದರು.

ಆರ್‌ಸಿಎಚ್‌ಓ ಅಧಿಕಾರಿ ಡಾ. ರೇಣುಕಾದೇವಿಗೆ ಸನ್ಮಾನ

ಚಾಮರಾಜನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಆರ್‌ಸಿಎಚ್‌ಓ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷೆ ಹಾಗೂ ಜಿಲ್ಲಾ ನೌಕರರ ಸಂಘದ ಅಧ್ಯಕ್ಷರಾದ ಡಾ. ರೇಣುಕಾದೇವಿ ಅವರನ್ನು ಸರ್ಕಾರಿ ನೌಕರ ಸಂಘದ ಖಜಾಂಚಿ ಶಿವಕುಮಾರಯ್ಯ ರಾಜ್ಯ ಪರಿಷತ್ ಸದಸ್ಯರಾದ ನಟರಾಜು, ಕಾರ್ಯದರ್ಶಿ ಡಿಎನ್ ಭರತ್ ಭೂಷಣ್ ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ ಹಿರಿಯ ಉಪಾಧ್ಯಕ್ಷರಾದ ಎಂಡಿ ಮಹದೇವಯ್ಯ ಹಾಗೂ ಬಿಪಿ ಪ್ರಕಾಶ್ ಪದಾಧಿಕಾರಿಗಳಾದ ನಾರಾಯಣ್ ಸೋಮಶೇಖರ್ ಪ್ರಸನ್ನ ಶಶಿಕುಮಾರ್ ಮೊದಲಾದವರು ಅಭಿನಂದಿಸಿದರು.

ಗೋ ರಾ ಶ್ರೀನಿವಾಸ ಅವರಿಗೆ ವಿಕಾಸ ಶ್ರೀ ಪ್ರಶಸ್ತಿ ಘೋಷಣೆ

ರಾಮನಗರ: ಸಮಾಜ ಸೇವೆ, ಹೋರಾಟ, ಪತ್ರಿಕೆ ಮತ್ತು ಡಿಜಿಟಲ್ ಮೀಡಿಯಾದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಪತ್ರಕರ್ತ ಗೋ. ರಾ.ಶ್ರೀನಿವಾಸ ಅವರಿಗೆ 2026 ರ "ವಿಕಾಸ ಶ್ರೀ" ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ (ರಿ) ಮೈಸೂರು ಸಂಸ್ಥೆ ಘೋಷಿಸಿದೆ.

ಗೋ ರಾ ಶ್ರೀನಿವಾಸ (ಶ್ರೀನಿವಾಸ ಜಿ ಆರ್) ರವರು ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಗೋವಿಂದೇಗೌಡನದೊಡ್ಡಿ ಗ್ರಾಮದವದರಾ ಗಿದ್ದು, ಕಳೆದ ಎರಡು ದಶಕಗಳ ಸಾಮಾಜಿಕ ಹೋರಾಟ, ಸಮಾಜ ಸೇವೆ ಹಾಗೂ ಒಂದೂವರೆ ದಶಕದಿಂದ ಪತ್ರಿಕೆ ಮತ್ತು ಡಿಜಿಟಲ್ ಮೀಡಿಯಾಯನ್ನು ಕಟ್ಟಿ ಬೆಳೆಸುವ ಮೂಲಕ ಸಾಧನೆಗೈದಿದ್ದಾರೆ. ಇವರಿಗೆ ಒಕ್ಕಲಿಗರ ಸಂಘದ ಸಂಸ್ಥಾಪಕರಲ್ಲೊಬ್ಬರಾದ ದಿ ಕೆ ಹೆಚ್ ರಾಮಯ್ಯ ರವರ ಜನ್ಮ ದಿನವಾದ ಜುಲೈ 24 ರ ಶುಕ್ರವಾರ ಇಳಿಹೊತ್ತು 04:00 ಗಂಟೆಗೆ ಮೈಸೂರಿನ ನಂಜಬಹದ್ದೂರ್ ಛತ್ರದ ಸಭಾಂಗಣದಲ್ಲಿ ಪ್ರಶಸ್ತಿ ವಿತರಿಸಿ ಗೌರವಿಸಲಾಗುವುದು ಎಂದು ಅಧ್ಯಕ್ಷ ಹೆಚ್ ಎಲ್ ಯಮುನಾ ತಿಳಿಸಿದ್ದಾರೆ.

ತಮ್ಮ ಸೇವೆಯನ್ನು ಗುರುತಿಸಿ ನೀಡುತ್ತಿರುವ ಈ ಗೌರವವು ಇನ್ನಷ್ಟು ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳಲು ಪ್ರೇರಣೆ ನೀಡಿದೆ. ತಮ್ಮನ್ನು 'ವಿಕಾಸ ಶ್ರೀ' ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಈ ಗೌರವವನ್ನು ಅತ್ಯಂತ ವಿನಮ್ರತೆಯಿಂದ ಸ್ವೀಕರಿಸುವುದಾಗಿ ಗೋ ರಾ ಶ್ರೀನಿವಾಸ ತಿಳಿಸಿದ್ದಾರೆ.

ತಮ್ಮನ್ನು ಗುರುತಿಸಿ ಗೌರವಿಸುತ್ತಿರುವ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ಹೆಚ್ ಎಲ್ ಯಮುನಾ, ಪದಾಧಿಕಾರಿಗಳು ಹಾಗೂ ಎಲ್ಲಾ ಸದಸ್ಯರಿಗೆ ಅನಂತಾನಂತ ಧನ್ಯವಾದಗಳನ್ನು ಅವರು ಸಲ್ಲಿಸಿದ್ದಾರೆ.

ಪಟೇಲ್ ಶಾಲೆಯಲ್ಲಿ ವೈದ್ಯರ ದಿನ

ರಾಮನಗರ: ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಪ್ರತಿಯೊಬ್ಬರಿಗೂ ವೈದ್ಯರ ಅವಶ್ಯಕತೆ ಹೆಚ್ಚಾಗಿದೆ. ನಾಗರೀಕರ ಆರೋಗ್ಯ ಕಾಪಾಡುವಲ್ಲಿ ವೈದ್ಯರು ಸಹ ಶ್ರಮಿಸುತ್ತಿದ್ದಾರೆ ಎಂದು ಇಲ್ಲಿನ ಪಟೇಲ್ ಆಂಗ್ಲ ಶಾಲೆಯ ಮುಖ್ಯ ಶಿಕ್ಷಕ ವಿನೋದ್ ಹೇಳಿದರು.

ಪಟೇಲ್ ಆಂಗ್ಲ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ವೈದ್ಯರ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಕೆಲವು ವರ್ಷಗಳ ಹಿಂದೆ ಕೋವಿಡ್ ಸೋಂಕು ಸಂದರ್ಭದಲ್ಲಿ ಅನೇಕ ವೈದ್ಯರು ತಮ್ಮ ಪ್ರಾಣವನ್ನು ತೆತ್ತಿದ್ದಾರೆ. ಕೋವಿಡ್ ಸೋಂಕಿನ ವೇಳೆ ವೈದ್ಯರು ಬಹುಮುಖ್ಯ ಪಾತ್ರವಹಿಸಿದ್ದರು. ನಾಗರೀಕರು ಕೋವಿಡ್ ಸೋಂಕಿನಿಂದ ದೂರ ಇರಲು ಅನೇಕ ಸಲಹೆ-ಸೂಚನೆಗಳನ್ನು ಸಹ ನಾಗರೀಕರಿಗೆ ತಿಳಿಸುತ್ತಿದ್ದರು. ದಿನನಿತ್ಯ ನಾಗರೀಕರ ಕಾಳಜಿವಹಿಸುತ್ತಿರುವ ವೈದ್ಯರ ಸೇವೆಯನ್ನು ಪ್ರತಿಯೊಬ್ಬರು ಗೌರವಿಸಬೇಕು ಎಂದು ಕರೆ ಕೊಟ್ಟರು.

ಬಿ.ಸಿ.ರಾಯ್ ಅವರ ಜನ್ಮದಿನವನ್ನು ವೈದ್ಯರ ದಿನವನ್ನಾಗಿ ಆಚರಿಸಲಾಗುತ್ತಿದೆ. ವೈದ್ಯರ ಸಾಮಾಜಿಕ ಸೇವೆಯನ್ನು ಗೌರವಿಸುವ ಸಲುವಾಗಿ ವೈದ್ಯರ ದಿನವನ್ನು ಆಚರಿಸಲಾಗುತ್ತಿದೆ. ವೈದ್ಯರ ದಿನಾಚರಣೆಯಲ್ಲಿ ಶಾಲೆಯ ಮಕ್ಕಳು ಸಹ ವೈದ್ಯರ ಪಾತ್ರಧಾರಿಗಳಾಗಿ ಕಿರು ನಾಟಕಗಳನ್ನು ಪ್ರದರ್ಶನ ನೀಡುತ್ತಿರುವುದು ಹೆಮ್ಮೆಯ ವಿಚಾರ ಎಂದರು. ಶಾಲೆಯ ಸಹ ಕಾರ್ಯದರ್ಶಿ ಕಾರ್ತಿಕ್ ಗೌಡ ಮಾತನಾಡಿ, ಕಿರು ನಾಟಕಗಳ ಮೂಲಕ ಅನೇಕ ಸಂಗತಿಗಳನ್ನು ಮನದ್ದಟು ಮಾಡಿಕೊಳ್ಳಬಹುದು. ವೈದ್ಯರ ದಿನಾಚರಣೆಯಲ್ಲಿ ಮಕ್ಕಳು ಕಿರು ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ವೈದ್ಯರ ಮಹತ್ವವನ್ನು ಸಾರಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕು ಆಸ್ಪತ್ರೆಗೆ ಬೇಕು ತುರ್ತುಚಿಕಿತ್ಸೆ

ಹೊಲಿಗೆ ಬಿಚ್ಚಿಸಲು ರೋಗಿಗಳೇ ಬ್ಲೇಡ್ ತಂದುಕೊಡಬೇಕಾದ ಪರಿಸ್ಥಿತಿ

▸▸ ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ಹೊಲಿಗೆ ಬಿಚ್ಚಿಸಲು ರೋಗಿಗಳೇ ಬ್ಲೇಡ್ ತಂದುಕೊಡಬೇಕು !

ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡುತ್ತಿಲ್ಲ. ಔಷಧಗಳನ್ನು ಖಾಸಗಿ ಮೆಡಿಕಲ್ ಗಳಿಗೆ ಬರೆಯುತ್ತಾರೆ ಎಂಬ ಆರೋಪಗಳು ಸಾರ್ವಜನಿಕರಿಂದ ವ್ಯಾಪಕವಾಗಿ ಕೇಳಿ ಬರುತ್ತಿದ್ದು, ಸರ್ಕಾರಿ ಆಸ್ಪತ್ರೆಗೆ ತುರ್ತು ಚಿಕಿತ್ಸೆಯ ಅನಿವಾರ್ಯತೆಯಿದೆ.

ದೂರದ ಊರುಗಳಿಂದ ಬಂದ ರೋಗಿಗಳು, ಸಹಾಯಕರು ದಣಿವಾರಿಸಿಕೊಳ್ಳಲು ಕುಡಿಯುವ ನೀರಿಲ್ಲ. ಬಡ ಹಾಗೂ ಮಧ್ಯಮ ವರ್ಗದವರಿಗೆ ಆಸರೆಯಾಗಬೇಕಿದ್ದ ತಾಲೂಕು ಆಸ್ಪತ್ರೆಯು ಅವ್ಯವಸ್ಥೆಯಿಂದ ಕೂಡಿರುವುದು ರೋಗಿಗಳಿಗೆ ಹೊರೆಯಾಗಿದೆ. ತಾಲೂಕು ಭೂ ವಿಸ್ತೀರ್ಣದಲ್ಲಿ ದೊಡ್ಡದಿದ್ದು, ಗ್ರಾಮಗಳಿಂದ ಕೇಂದ್ರ ಸ್ಥಾನಕ್ಕೆ ಸಂಪರ್ಕ ಕಲ್ಪಿಸಲು ಗಂಟೆಗಟ್ಟಲೆ ಸಮಯಬೇಕಿದೆ. ಇದರಿಂದ ಕೋಟೆಯ ಸರ್ಕಾರಿ ಆಸ್ಪತ್ರೆಗೆ ಬರಲು ಸಾಕಷ್ಟು ವಿಳಂಬವಾಗಲಿದೆ. ಇದನ್ನು ಮನಗಂಡು ಅಲ್ಲಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ.

ಇವುಗಳಲ್ಲಿ ಅಗತ್ಯ ಔಷಧೋಪಚಾರ ಲಭ್ಯವಿಲ್ಲದ ಕಾರಣ ಪಟ್ಟಣದಲ್ಲಿರುವ ತಾಲೂಕು ಆಸ್ಪತ್ರೆಗೆ ತೆರಳುವುದು ಅನಿವಾರ್ಯವಾಗಿದೆ. ತಾಲೂಕಿನಲ್ಲಿ 110ಕ್ಕೂ ಹೆಚ್ಚು ಆದಿವಾಸಿ ಗ್ರಾಮಗಳಿದ್ದು, ಬಹುತೇಕರು ಸರ್ಕಾರಿ ಆಸ್ಪತ್ರೆಗಳನ್ನೇ ಅವಲಂಭಿಸಿದ್ದಾರೆ. ಗರ್ಭಿಣಿಯರಿಗೆ ತಪಾಸಣೆಗೆ ಅನುಕೂಲವಾಗಲಿ ಎಂದು ಇತ್ತೀಚೆಗೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಅದರೆ, ಈ ವ್ಯವಸ್ಥೆ ಬಂದಷ್ಟೇ ವೇಗದಲ್ಲಿ ನಿಂತಿದೆ.

ಹೆರಿಗೆ ವೇಳೆಯ ಪರಿಸ್ಥಿತಿಯೂ ಹೇಳತೀರದ್ದಾಗಿದ್ದು, ಸುಲಭವಾಗಿ ಆಗುವ ಹೆರಿಗೆಯನ್ನು ಉದ್ದೇಶಪೂರ್ವಕವಾಗಿ ಸಿಸೇರಿಯನ್ ಡೆಲವರಿ ಮಾಡಬೇಕು ಎಂದು ಬಿಂಬಿಸಲಾಗುತ್ತದೆ ಎಂಬ ಆರೋಪದ ಜೊತೆಗೆ, ಹೆರಿಗೆಗೆ ಹಣ ನಿಗದಿ ಮಾಡಿದ್ದಾರೆ ಎಂಬ ಗಂಭೀರ ಆಪಾದನೆ ಕೇಳಿಬರುತ್ತಿದೆ.

ಮೃತರ ಮರಣೋತ್ತರ ಪರೀಕ್ಷೆ ನಡೆಸಲು ಸಾಕಷ್ಟು ವಿಳಂಬ ಮಾಡುತ್ತಾರೆ ಎಂದು ಸಾರ್ವಜನಿಕರು ದೂರಿದ್ದರೆ, ಪರೀಕ್ಷೆಗೆ ಅಗತ್ಯ ಸಲಕರಣೆಗಳಿಲ್ಲ ಎಂದು ವೈದ್ಯರು ಸಮಜಾಯಿಸಿ ನೀಡಿದ್ದರು. ಆಸ್ಪತ್ರೆಯಲ್ಲಿ ಕುಡಿಯುವ ನೀರಿಲ್ಲ. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಲಂಚಾವತಾರ ಮಿತಿಮೀರಿದೆ. ಕೆಲ ವೈದ್ಯರಿಗೆ ಹಣ ನೀಡಿದರೆ ಮಾತ್ರ ಚಿಕಿತ್ಸೆಗೆ ಸೂಚಿಸುತ್ತಾರೆ. ಹಣ ಮಾಡುವ ಉದ್ದೇಶದಿಂದ ಕೆಲ ವೈದ್ಯರು ಒಂದೊಂದು ಖಾಸಗಿ ಮೆಡಿಕಲ್ ಗಳನ್ನು ದತ್ತು ತೆಗೆದುಕೊಂಡಂತೆ ಕಾಣುತ್ತದೆ. ಇಂತದ್ದೇ ಮೆಡಿಕಲ್ ನಿಂದ ಔಷಧ ತರುವಂತೆ ಹೆಸರು ಸಮೇತ ಹೇಳುತ್ತಾರೆ. ಉಚಿತ ಚಿಕಿತ್ಸೆಯೆಂದು ಸರ್ಕಾರಿ ಆಸ್ಪತ್ರೆಗೆ ಬಂದರೆ ಇಲ್ಲೂ ಹಣ ತೆರಬೇಕು ಎಂದು ಬೋರೆದೇವರಮುಂಟಿ ಗ್ರಾಮದ ರಾಮರಾಜು ಕಿಡಿಕಾರಿದ್ದಾರೆ.

"ಹೊಲಿಗೆ ಬಿಚ್ಚಲು ರೋಗಿಯೇ ಬ್ಲೇಡ್ ಅನ್ನು ತಂದು ಕೊಡಬೇಕೆ ? ಹಳೆ ಆಸ್ಪತ್ರೆಯ ಮಹಿಳಾ ವಾರ್ಡ್ ಅಲ್ಲಿ ಶೌಚಾಯದ ಬಾಗಿಲು ಇಲ್ಲ. ರೋಗಿಗಳ ಸ್ನಾನಕ್ಕೆ ನೀರು ಬರುವುದಿಲ್ಲ. ಸ್ನಾನಕ್ಕೆ ಬಕೆಟ್ ಇಲ್ಲ. ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ನಾಲ್ಕೈದು ತಿಂಗಳು ಕಳೆದಿವೆ. ಇಷ್ಟೆಲ್ಲ ಸಮಸ್ಯೆಗಳು ಆಸ್ಪತ್ರೆ ಆಡಳಿತಾಧಿಕಾರಿ ಡಾ.ಪೂರ್ಣಿಮಾ ಅವರಿಗೆ ತಿಳಿದಿಲ್ಲವೇ ? ಸಮಸ್ಯೆ ಬಗೆಹರಿಸಲು ಮೇಲಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಬೇಕು. ಈ ಬಗ್ಗೆ ತಾಲೂಕು ಆರೋಗ್ಯಾಧಿಕಾರಿ ರವಿಕುಮಾರ್, ಶಾಸಕ ಅನಿಲ್ ಚಿಕ್ಕಮಾದು ತುರ್ತು ಕ್ರಮವಹಿಸಬೇಕಿದೆ.

▸▸ –ರಾಮರಾಜು ಬೋರೆದೇವರಮುಂಟಿ ಗ್ರಾಮಸ್ಥ.

ವೈದ್ಯರ ಪ್ರತಿಷ್ಠೆಯಿಂದ ರೋಗಿಗಳಿಗೆ ಸಂಕಷ್ಟ

ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆಗೆ ಬಂದಿರುವ ವೈದ್ಯರು ಸ್ವ-ಪ್ರತಿಷ್ಠೆ ತೋರುತ್ತಿದ್ದಾರೆ. ಇದರಿಂದ ರೋಗಿಗಳನ್ನು ಸರಿಯಾಗಿ ಪರೀಕ್ಷಿಸುತ್ತಿಲ್ಲ. ಡಾಕ್ಟರ್ಸ್ ಗಳ ಮುಸುಕಿನ ಗುದ್ದಾಟದಿಂದ ರೋಗಿಗಳನ್ನು ಕೌಂಟರ್ ಇಂದ, ಕೌಂಟರ್ ಗೆ ಅಲೆದಾಡುಸುತ್ತಿದ್ದಾರೆ. ಇದರಿಂದ ಗಂಡ, ಹೆಂಡತಿ ಜಗಳದಲ್ಲಿ ಕೂಸು ಬಡವಾದಂತ ಪರಿಸ್ಥಿತಿಯಲ್ಲಿ ರೋಗಿಗಳಿದ್ದಾರೆ.

ಸಮಸ್ಯೆ ಬಗೆಹರಿಸಲು ಇಚ್ಛಾಶಕ್ತಿ ಕೊರತೆ
ಕೈ ಚೆಲ್ಲಿ ಕುಳಿತ ಶಾಸಕ

ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ವ್ಯವಸ್ಥೆ ಸ್ಥಗಿತವಾಗಿರುವುದರಿಂದ ಬಡವರಿಗೆ ತೊಂದರೆಯಾಗುತ್ತಿದೆ. ದೂರದ ಊರುಗಳಿಂದ ಪಟ್ಟಣಕ್ಕೆ ಬರಬೇಕು. ಖಾಸಗೀ ಸೆಂಟರ್‌ಗಳಲ್ಲಿ ಸಾವಿರ ರೂ.ಗಳಿಗೂ ಹೆಚ್ಚು ಹಣ ಪಡೆಯುತ್ತಾರೆ. ಗಂಟೆಗಟ್ಟಲೆ ಸಾಲುಗಟ್ಟಿ ನಿಂತಿಕೊಳ್ಳಬೇಕು. ಗರ್ಭಿಣಿಯರ ಜೊತೆಯಲ್ಲಿ ಬರುವ ಸಹಾಯಕರಿಗೂ ಒಂದು ದಿನದ ಕೆಲಸ ನಷ್ಟ. ಇದರಿಂದ ಆರ್ಥಿಕ ಹೊರೆಯಾಗುತ್ತಿದೆ. ನಿಗದಿತ ವೇಳೆಗೆ ಸರ್ಕಾರಿ ಆಸ್ಪತ್ರೆಗೆ ವೈದ್ಯರು ಬರುತ್ತಿಲ್ಲ. ಉದ್ದೇಶಪೂರ್ವಕವಾಗಿ ಖಾಸಗಿ ಮೆಡಿಕಲ್ಗೆ ಔಷಧ ಬರೆದುಕೊಡುತ್ತಿದ್ದಾರೆ. ಸರ್ಕಾರಿ ಆಸ್ಪತ್

ಭಾರತ್ ಜೋಡೋ ಯುವ ಸಂಘ'ಗಳನ್ನು ರಚನೆಗೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

ಮಂಡ್ಯ : ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸಲು 'ಭಾರತ್ ಜೋಡೋ ಯುವ ಸಂಘ'ಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಯಶಸ್ವಿಗೊಳಿಸಲು ತಾಲ್ಲೂಕು ಮಟ್ಟದಲ್ಲಿ ಸಮಿತಿ ರಚಿಸಲಾಗಿದ್ದು, ಈ ಸಂಬಂಧ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ಭಾರತ್ ಜೋಡೋ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸುವ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ, ವೈಜ್ಞಾನಿಕ ಮನೋಭಾವ ಹಾಗೂ ಸಾಮಾಜಿಕ ಸಾಮರಸ್ಯ ಉತ್ತೇಜಿಸುವ ಸಲುವಾಗಿ ರಾಜ್ಯದ ಗ್ರಾಮ ಪಂಚಾಯ್ತಿಗಳು ಮತ್ತು ನಗರ ವಾರ್ಡುಗಳ ವ್ಯಾಪ್ತಿಯಲ್ಲಿ ಭಾರತ್ ಜೋಡೋ ಯುವ ಸಂಘ ಸ್ಥಾಪಿಸಲು ರಾಜ್ಯ ಸರ್ಕಾರ ಅಧಿಕೃತ ಆದೇಶ ಮಾಡಿದೆ.

ಭಾರತ್ ಜೋಡೋ ಯುವ ಸಂಘಗಳ ರಚನೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ಇಲಾಖೆಗಳು ಸಮನ್ವಯದೊಂದಿಗೆ ಕೆಲಸ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಸಭೆಯಲ್ಲಿ ತಿಳಿಸಿದರು.

ಗ್ರಾಮ ಪಂಚಾಯಿತಿ ಆಫೀಸ್, ಗ್ರಾಮ್ ಒನ್, ಕರ್ನಾಟಕ ಒನ್ ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಮಟ್ಟದಲ್ಲಿ ಸಂಘಗಳನ್ನು ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. ಸದಸ್ಯರ ವಯೋಮಿತಿ 16 ರಿಂದ 35 ವರ್ಷಗಳ ನಡುವೆ ಇರಬೇಕು. ಜುಲೈ 30ರಿಂದ ನೋಂದಣಿ ಕಾರ್ಯ ಆರಂಭವಾಗಲ್ಲಿದೆ ಎಂದು ಅವರು ತಿಳಿಸಿದರು.

ಗ್ರಾಮ, ನಗರ ವ್ಯಾಪ್ತಿಗಳಲ್ಲಿ ಯುವಜನರ ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಿ, ಸಂಘಗಳ ರಚನೆಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಭಾರತ ಜೋಡೋ ಕಾರ್ಯಕ್ರಮದ ಬಗ್ಗೆ ಜನಸಾಮಾನ್ಯರಲ್ಲಿ ಹಾಗೂ ಕಾಲೇಜುಗಳಲ್ಲಿ ಅರಿವು ಮೂಡಿಸಿ ಮತ್ತು ಪ್ರಚಾರ ಕೈಗೊಳ್ಳಲು ಕ್ರಮ ಕೈಗೊಂಡು ನೊಂದಣಿ ಹೆಚ್ಚಾಗುವಂತೆ ಅಗತ್ಯ ಕ್ರಮವಹಿಸಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ. ಆರ್. ನಂದಿನಿ ಅವರು ಯುವಜನರನ್ನು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಭಾರತ್ ಜೋಡೋ ಯುವ ಸಂಘಗಳನ್ನು ಪರಿಣಾಮಕಾರಿಯಾಗಿ ರೂಪಿಸುವ ಕುರಿತು ಅಧಿಕಾರಿಗಳು ತಂಡವಾಗಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು ಅಧಿಕಾರಿಗಳು ತಿಳಿದು ಜವಬ್ದಾರಿಯುತವಾಗಿ ಕೆಲಸ ನಿರ್ವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ. ಎಸ್. ಶಿವನಂದಾಮೂರ್ತಿ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮನುಜಶ್ರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯ ಬ್ರಾಹ್ಮಣ ಸಭಾ ಭ್ರಷ್ಟಾಚಾರ ವಿರುದ್ಧ ಪ್ರತಿಭಟನೆ

ಮಂಡ್ಯ : ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದಲ್ಲಿ ನಡೆದಿರುವ ಅಖಂಡ ಭ್ರಷ್ಟಾಚಾರ ಬೆಳಕಿಗೆ ಬಂದಿದ್ದು ಅದನ್ನು ಸಂಪೂರ್ಣ ಕಟ್ಟಿಕೊಡಬೇಕು ಮತ್ತು ಇದಕ್ಕೆ ಕಾರಣರಾದ ಸಭಾದ ಅಧ್ಯಕ್ಷ ಹಾಗೂ ನಿರ್ದೇಶಕರು ಗಳು ಕೂಡಲೇ ರಾಜೀನಾಮೆ ನೀಡಬೇಕೆದು ಅಗ್ರಹಿಸಿ ಇಂದು ಬ್ರಾಹ್ಮಣ ಸಭಾದ ಸದಸ್ಯರುಗಳು ಸಭಾದ ಮುಂಭಾಗ ಸಾಂಕೇತಿಕ ಧರಣಿ ನಡೆಸಿದರು.

ಸಭಾ ದ ನಿರ್ದೇಶಕ ಹೂಳಲು ರಾಘವೇಂದ್ರ ಮತ್ತು ಅರುಣ್ ಪ್ರಸಾದ್ ಮತ್ತು ಭ್ರಷ್ಟಾಚಾರ ವಿಚಾರಣ ಸಮಿತಿ ಅಧ್ಯಕ್ಷ ಲಕ್ಷ್ಮೀರಾಯಣ, ಸೋಮಕುಮಾರ್, ಜಿ. ವಿ. ಕುಮಾರ್, ವಿದ್ಯಾಶಂಕರ್, ರಾಮಪ್ರಸಾದ್. ಪ್ರೊ. ನರಸಿಂಹ ಮೂರ್ತಿ ಮುಂತಾದವರ ನೇತೃತ್ವದಲ್ಲಿ ಜಮಾವನೆಗೊಂಡ ನೂರಾರು ಸದಸ್ಯರುಗಳು ಸಭಾದ ಅಧ್ಯಕ ಹಾಗೂ ನಿರ್ದೇಶಕರು ಗಳ ಅಖಂಡ ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸಿ,ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ವಿಚಾರಣಾ ಸಮಿತಿಯ ಸದಸ್ಯ ಅರುಣ್ ಪ್ರಸಾದ್ ಸುಮಾರು ವರ್ಷಗಳಿಂದ ಲಕ್ಷಾಂತರ ರೂಗಳ ಭ್ರಷ್ಟಾಚಾರ ನಡೆದಿರುವುದು ತನಿಖೆಯಿಂದ ಬೆಳಕಿಗೆ ಬಂದಿದ್ದು ಸುಮಾರು 65 ಲಕ್ಷಕ್ಕೂ ಮಿಗಿಲಾಗಿ ಹಣ ದುರುಪಯೋಗವಾಗಿದೆ ಎಂದು ದಾಖಲೆಗಳಿಂದ ಧೃಡಪಟ್ಟಿದೆ ಆದರೆ ಅದನ್ನು ಸಾಮೂಹಿಕವಾಗಿ ನಿರಾಕರಿಸುತ್ತಿರುವುದು ಖಂಡನಿಯ ವಾಗಿದ್ದು ಕೂಡಲೇ ದುರುಪಯೋಗ ವಾಗಿರುವ ಸುಮಾರು 65 ಲಕ್ಷ ರೂಗಳನ್ನು ಸಭಾಕ್ಕೆ ಕೊಡಬೇಕು ಮತ್ತು ಸದಸ್ಯರುಗಳು ರಾಜೀನಾಮೆ ನೀಡಬೇಕು ಎಂದು ಸಭಾದ ಗೌರವ ಅಧ್ಯಕ್ಷ ಬೆಳ್ಳೂರು ಶಿವರಾಮ್ ಅವರು ತಮ್ಮ ಬೆಂಬಲಿತರಿಗೆ ಸೂಚನೆ ನೀಡಿ ಕಾರ್ಯಗತ ಮಾಡಿ ಬ್ರಾಹ್ಮಣ ಸಭಾದ ಗೌರವವ ನ್ನು ಕಾಪಾಡಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಮಾತನಾಡಿದ ಸದಸ್ಯ ಹೂಳಲು ರಾಘವೇಂದ್ರ ಸುಮಾರು 1 ಕೋಟಿ ರುಗೂ ಮಿಗಿಲು ಕಂದಾಯ ಪಾವತಿಸಿಲ್ಲ. ಎಂದು ತಿಳಿದು ಬಂದಿದೆ. ಇದನ್ನು ಪ್ರಶ್ನಿಸಿದರೆ ಅಧ್ಯಕ್ಷರು ಉಡಾಫೇ ಯಿಂದ ವರ್ತಿ ಸುತ್ತಿದ್ದಾರೆ. ಈ ಭ್ರಷ್ಟಾಚಾರಗಳಿಗೆಲ್ಲ ಅಂತ್ಯ ಹಾಡುವ ಕಾಲ ಬಂದಿದ್ದು ಜುಲೈ 25 ರಂದು ನಡೆಯಲಿರುವ ಸಾರ್ವಜನಿಕ ಮಹಾ ಸಭೆಯಲ್ಲಿ ಈ ವಿಷಯ ಇತ್ಯಾರ್ಥವಾಗಬೇಕು ಇಲ್ಲದಿದ್ದರೆ ಈ ಸಂಬಂಧ ಪೊಲೀಸ್ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ದೂರು ಸಲ್ಲಿಸಿ ಮುಂದಿನ ಕ್ರಮಕ್ಕಾಗಿ ಒತ್ತಾಯಿಸಲಾಗುತ್ತದೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ಜಿ. ವಿ. ಕುಮಾರ್, ಪ್ರದೀಪ್ ಕುಮಾರ್, ಶಂಕರ್ ಹಿಟ್ಟುವಲ್ಲಿ, ವಿದ್ಯಾಶಂಕರ್, ಮುಂತಾದವರು ಮಾತನಾಡಿ ಅಗ್ರಹಿಸಿದರು.

ಪ್ರಭಟನೆಯಲ್ಲಿ ಶ್ರೀಪಾಟಿ, ಬಾಲಾಜಿ ಸತ್ಯಪ್ಪ, ರಂಗನಾಥ, ಬಾಬು, ನಾಗರಾಜು, ಸಂಧ್ಯಾರಾಣಿ, ಭಾರತಿ, ಶ್ರೀನಿವಾಸನ, ನರಸಿಂಹನ್, ರಮೇಶ್, ವೆಂಕಟೇಶ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಜು.27-28ರಂದು ಕರ್ನಾಟಕ ತತ್ವಪದ ಗಾಯನ ಸಮಾವೇಶ

ಜು.25ರಂದು ಪ್ರಶಸ್ತಿ ಪ್ರದಾನ,

ಜು.22ರಂದು ಗುರುಸ್ಮರಣೆ ಕಾರ್ಯಕ್ರಮ

ಮಂಡ್ಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಸಹಕಾರದೊಂದಿಗೆ ಕರ್ನಾಟಕ ಸಂಘದ ವತಿಯಿಂದ ಕರ್ನಾಟಕ ತತ್ವಪದ ಗಾಯನ ಸಮಾವೇಶವನ್ನು ಜು.27 ಮತ್ತು 28ರಂದು ತಾಲೂಕಿನ ಕೊಮ್ಮೇರಹಳ್ಳಿಯ ಬಿಜಿಎಸ್ ಸಂಸ್ಥೆಯ ಕುವೆಂಪು ಸಭಾಭವನದಲ್ಲಿ ಆಯೋಜಿಸಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.27ರಂದು ಬೆಳಗ್ಗೆ 10.30ಕ್ಕೆ ತತ್ವಪದ ಸಮಾವೇಶದ ಚಾಲನೆ ಮತ್ತು ತತ್ವಪದ ಸಂಪದ ಸಂಚಿಕೆ ಬಿಡುಗಡೆಯನ್ನು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ.ಬೋರಲಿಂಗಯ್ಯ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕ ಪಿ.ರವಿಕುಮಾರ್‌ಗೌಡ ಭಾಗವಹಿಸಲಿದ್ದಾರೆ. ಜು.27ರಂದು ಬೆಳಗ್ಗೆ 11ಗಂಟೆಗೆ ಹಾಗೂ ಜು.28ರಂದು ಬೆಳಗ್ಗೆ 10 ಗಂಟೆಗೆ ತತ್ವಪದ ಗಾಯನ ನಡೆಯಲಿದೆ ಎಂದರು.

ಜು.28ರ ಸಂಜೆ 4 ಗಂಟೆಗೆ ಕಾರ್ಯಕ್ರಮದ ಸಮಾರೋಪ ನಡೆಯಲಿದ್ದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು, ಆದಿಚುಂದನಗಿರಿ ಶಾಖಾ ಮಠದ ಕಾರ್ಯದರ್ಶಿ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸುವರು. ಕಲಬುರಗಿಯ ಡಾ.ಮೀನಾಕ್ಷಿ ಬಾಳಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ ಭಾಗವಹಿಸುವರು ಎಂದು ಹೇಳಿದರು.

ಕರ್ನಾಟಕ ಸಂಘದ ವತಿಯಿಂದ ಜು.25ರಂದು ಸಂಜೆ 4 ಗಂಟೆಗೆ ಜಾನಪದ, ವಿಜ್ಞಾನ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ನಗರದ ಕೆವಿಎಸ್ ಶತಮಾನೋತ್ಸವ ಭವನದಲ್ಲಿ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಅಧ್ಯಕ್ಷತೆ ವಹಿಸುವರು. ಆಂಗ್ಲ ಉಪನ್ಯಾಸಕ ಎಸ್.ಸುದೀಪ್‌ಕುಮಾರ್, ಸಾಹಿತಿಗಳಾದ ಗುಣಸಾಗರಿ ಸಿ.ನಾಗರಾಜು, ಪ್ರೊ.ನರಸಿಂಹೇಗೌಡ ನಾರಣಾಪುರ ಉಪಸ್ಥಿತರಿರುವರು ಎಂದರು.

ಹೊನ್ನನಾಯಕನಹಳ್ಳಿ ಶಾಲೆಗೆ ವಿಜ್ಞಾನ ಶಿಕ್ಷಕ ಎನ್.ಜಿ.ಅಶೋಕ್ ಅವರಿಗೆ ಎಂ.ಸಿದ್ದರಾಮು ವಿಜ್ಞಾನ ಶಿಕ್ಷಕ ಪ್ರಶಸ್ತಿ, ತತ್ವಪದ ಕಲಾವಿದ ಸಿ.ಆರ್.ಸಂಜೀವಯ್ಯ ಅವಿರಿಗೆ ಗುಣಸಾಗರಿ ಸಿ.ನಾಗರಾಜು ಜಾನಪದ ಕಲಾವಿದ ಪ್ರಶಸ್ತಿ, ಜಾನಪದ ಕಲಾವಿದ ಉಮೇಶ್ ತೆಂಕನಹಳ್ಳಿ ಅವರಿಗೆ ಸಿ.ನಾಗರಾಜು ಜನಪದ ಕಲಾವಿದ ಪ್ರಶಸ್ತಿ ಹಾಗೂ ತತ್ವಪದ ಕಲಾವಿದೆ ನಂಜಮ್ಮ ಅವರಿಗೆ ಚನ್ನಮ್ಮ ಕರಿಯಪ್ಪ ಜನಪದ ಕಲಾವಿದೆ ಪ್ರಶಸ್ತಿಯನ್ನು ಉದ್ಯಮಿ ಜಿ.ಸಿ.ಪ್ರಸನ್ನಕುಮಾರ್ ಪ್ರದಾನ ಮಾಡುವರು ಎಂದು ವಿವರಿಸಿದರು.

ಕರ್ನಾಟಕ ಸಂಘದಿಂದ ತತ್ತ ?ವಪದಗಳ ತಾತ್ವಿಕ ಸಂಗಮ ಗುರು ಸ್ಮರಣೆ ಕಾರ್ಯಕ್ರಮವು ಜು.22ರಂದು ಸಂಜೆ 5 ಗಂಟೆಗೆ ನಗರದ ಕೆವಿಎಸ್ ಶತಮಾನೋತ್ಸವ ಭವನದಲ್ಲಿ ನಡೆಯಲಿದೆ. ನಿವೃತ್ತ ಅರಣ್ಯ ಅಧಿಕಾರಿ ಎ.ಎಂ. ಅಣ್ಣಯ್ಯ ಗೌರವ ಉಪಸ್ಥಿತಿ ಇರಲಿದ್ದಾರೆ. ತತ್ವಪದ ಶಿಬಿರದ ನಿರ್ದೇಶಕರಾದ ಗಾಮನಹಳ್ಳಿ ಸ್ವಾಮಿ, ಹನುಮಂತು ಭಾಗವಹಿಸಲಿದ್ದು, ಕನ್ನಡ ಉಪನ್ಯಾಸಕಿ ಎಂ.ಕೆ.ದಿವ್ಯಜ್ಯೋತಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಕಾರ್ಯದರ್ಶಿ ಎಚ್.ಡಿ.ಸೋಮಶೇಖರ್ ಇದ್ದರು.

ಸಂವಿಧಾನದ ಆಶಯಗಳ ಅನುಷ್ಠಾನಕ್ಕೆ ಸರ್ಕಾರ ಮುಂದಾಗಲಿ

ವೆಂಕಟಗಿರಿಯಯ್ಯ ಆಗ್ರಹ

ಮಂಡ್ಯ: ಸಂವಿಧಾನದ ಆಶಯಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕನಸಿನ ಪ್ರಬುದ್ಧ ಭಾರತ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮಾನತೆ ಸ್ಥಾಪಿಸುವ ಉದ್ದೇಶದಿಂದ ಡಾ. ಅಂಬೇಡ್ಕರ್ ಸಂವಿಧಾನ ರೂಪಿಸಿದ್ದರೂ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳಿಂದ ಶೋಷಿತ ಸಮುದಾಯಗಳು ಇನ್ನೂ ಹಿಂದುಳಿದಿವೆ ಎಂದು ಆರೋಪಿಸಿದರು.

ದಲಿತರು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ರೈತರಿಗೆ ನೈಜ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ದೊರಕುವಂತೆ ಸರ್ಕಾರಗಳು ಕ್ರಮ ಕೈಗೊಳ್ಳಬೇಕು. ಭಾರತೀಯ ಮೂಲ ನಿವಾಸಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಆಗ್ರಹಿಸಿದರು.

ಎಸ್‌ಸಿಪಿ-ಟಿಎಸ್‌ಪಿ ಯೋಜನೆಗಳ ಆಶಯಕ್ಕೆ ವಿರುದ್ಧವಾಗಿರುವ ಕಲಂ 7(ಸಿ) ರದ್ದುಪಡಿಸಬೇಕು. ಬೇರೆ ಯೋಜನೆಗಳಿಗೆ ವರ್ಗಾಯಿಸಿರುವ ?2.14 ಲಕ್ಷ ಕೋಟಿ ಅನುದಾನವನ್ನು ಮರು ಎಸ್‌ಸಿ-ಎಸ್‌ಟಿ ಸಮುದಾಯಗಳ ಅಭಿವೃದ್ಧಿಗೆ ಮೀಸಲಿಡಬೇಕು. ಎಸ್‌ಸಿ-ಎಸ್‌ಟಿ ಕುಟುಂಬಗಳಿಗೆ ತಲಾ -25 ಲಕ್ಷ ಅನುದಾನ ಘೋಷಿಸಬೇಕು. ಭೂ ವರ್ಗಾವಣೆ ನಿಷೇಧ ಕಾಯ್ದೆಯನ್ನು ಬಲಪಡಿಸುವುದು, ಜಾತಿ ಸಮೀಕ್ಷೆ ವರದಿ ಪ್ರಕಟಿಸುವುದು, ಶೇ.75 ಮೀಸಲಾತಿ ಜಾರಿಗೊಳಿಸುವುದು, ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಸರ್ಕಾರಿ ಸೇವೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದರು.

ಮಳೆ ಕೊರತೆಯಿಂದ ಮಂಡ್ಯ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ಪ್ರತಿ ಎಕರೆಗೆ ಕನಿಷ್ಠ ?50 ಸಾವಿರ ಪರಿಹಾರ ನೀಡಬೇಕು. ರೈತರ ಸಾಲಮನ್ನಾ ಮಾಡಬೇಕು. ಜನ-ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವು ಒದಗಿಸಲು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಅಧ್ಯಕ್ಷ ಬಿ. ಆನಂದ್, ಮಹಿಳಾ ಜಿಲ್ಲಾ ಅಧ್ಯಕ್ಷೆ ಜಿ. ಸುಶ್ಮಿತಾ, ತಾಲ್ಲೂಕು ಅಧ್ಯಕ್ಷ ಮುತ್ತರಾಜು, ಸ್ವಾಮಿ, ಕುಮಾರ್, ಹೋಬಳಿ ಅಧ್ಯಕ್ಷ ಚಂದ್ರು, ಸಿ. ಅಶ್ವತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

29ರಂದು ಉದ್ಯಮಶೀಲತಾ ತಿಳುವಳಿಕೆ ಶಿಬಿರ: ಅರ್ಜಿ ಆಹ್ವಾನ

ರಾಮನಗರ: ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಾಯೋಜಕತ್ವದಲ್ಲಿ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲಾ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್) ವತಿಯಿಂದ ಸ್ವಂತ ಉದ್ಯೋಗ ಸ್ಥಾಪಿಸಲು ಬಯಸುವ ಮಹಿಳೆಯರಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಜು.29 ರಂದು ಆಯೋಜಿಸಲಾಗಿದ್ದು, ಆಸಕ್ತ ಮಹಿಳೆಯುರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಜು. 27 ಕೊನೆಯ ದಿನ, ಮಹಿಳಾ ಉದ್ಯಮಶೀಲರಿಗೆ ಅನುಕೂಲವಾಗಲು ಸ್ವಂತ ಉದ್ಯಮ ಸ್ಥಾಪಿಸಲು ಅನುಸಿರಿಸುವ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗ ಯೋಜನೆಗಳು, ಬ್ಯಾಂಕಿನ ವ್ಯವಹಾರದ ಕುರಿತು ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಆಯೋಜಿಸಲಾಗಿದೆ. ಅಭ್ಯರ್ಥಿಗಳು 18 ರಿಂದ 40 ವರ್ಷದೊಳಗಿರಬೇಕು ಹಾಗೂ ಎಸ್.ಎಸ್. ಎಲ್.ಸಿ. ಪಾಸಾಗಿರಬೇಕು. ಎಲ್ಲಾ ವರ್ಗದ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗೆ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ನಂ. 208, ಕಂದಾಯ ಭವನ, ಬಿ.ಎಂ. ರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ-562159 ಅಥವಾ 7090299843 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಸಿಡಾಕ್‌ನ ಸಲಹೆಗಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರದ ಯಶಸ್ವಿ ಪುಸ್ತಕ ಪರಿಚಯ,

ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ

ಹಾಸನ : ಮನೆಗೊಂದು ಗ್ರಂಥಾಲಯ ಕಾರ್ಯಕ್ರಮದಲ್ಲಿ ಲೇಖಕರು ಕ

ಅತ್ತೆಯು ಅತ್ತೆಯಿಂದ ಕಲಿತಿದ್ದು..

ನಂದಿನಿ ವಿವೇಕ್..
ಹೊಸದುರ್ಗ

ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ಅತ್ತೆ ಸೊಸೆಯರ ನಡುವೆ ಜಗಳಗಳು ಇದ್ದೇ ಇರುತ್ತವೆ . ಕೆಲವೊಬ್ಬರ ಮನೆಗಳಲ್ಲಿ ಜಾಸ್ತಿ ಇದ್ದರೆ ಕೆಲವೊಬ್ಬರ ಮನೆಗಳಲ್ಲಿ ಕಡಿಮೆ ಇರುತ್ತದೆ... ಅಥವಾ ಯಾವುದಾದರೂ ವಿಚಾರಗಳಿಗೆ ಭಿನ್ನಾಭಿಪ್ರಾಯಗಳು ಇರುತ್ತದೆ. ಕೆಲವೊಮ್ಮೆ ಸ್ವಂತ ಅಮ್ಮ ಮಕ್ಕಳಿಗೂ ಅಥವಾ ಅಣ್ಣ–ತಮ್ಮಂದಿರಿಗೂ ಅಪ್ಪ ಮಗನಿಗೂ ಕೂಡ ವೈಮನಸ್ಸು ,ಭಿನ್ನಾಭಿಪ್ರಾಯಗಳು ಬಂದೇ ಬರುತ್ತವೇ ..

ಎಷ್ಟೋ ಜನ ಹೇಳುವುದನ್ನು ಕೇಳಿರಬಹುದು ನನಗಿಂತ ತುಂಬಾ ವಯಸ್ಸಾದ ಅತ್ತೆಯೇ ನನ್ನನ್ನು ಮಗಳಿನಂತೆ ನೋಡಿಕೊಂಡಿಲ್ಲ ಅಂತದರಲ್ಲಿ ಅವರಿಗಿಂತ ತುಂಬಾ ಚಿಕ್ಕವಳಾದ ನಾನೇಗೆ ಅವರನ್ನು ತಾಯಿಯಾಗಿ ಒಪ್ಪಿಕೊಳ್ಳಲಿ ಎಂದು.. ಎಲ್ಲರೂ ಹಾಗೆ ಇರದಿದ್ದರೂ ಕೂಡ ಕೆಲವೊಬ್ಬರು ಆ ರೀತಿ ಇರುತ್ತಾರೆ..

ಇಲ್ಲಿ ನಾನು ಖಂಡಿತ ನಾವು ಎಷ್ಟು ಚೆನ್ನಾಗಿದ್ದೇವೆ ಅಥವಾ ನಮ್ಮ ಅತ್ತೆ ಎಷ್ಟು ಒಳ್ಳೆಯವರು ಎಂದು ತೋರಿಸಲು ಈ ಲೇಖನವನ್ನು ಬರೆದಿಲ್ಲ ಸಹಜವಾಗಿ ಹೇಗೆ ಒಳ್ಳೆತನ ಕೂಡ ಪರಂಪರೆಯಿಂದ ಮುಂದುವರೆಯುವುದು ಎಂದು ತಿಳಿಸುವ ಉದ್ದೇಶವಷ್ಟೇ..

ಪ್ರತಿಯೊಬ್ಬ ಹೆಣ್ಣು ಮಕ್ಕಳಿಗೂ ಕೂಡ ಅವರ ತವರು ಮನೆಯಲ್ಲಿ ಮಾಡಿದ ಅಡುಗೆ ಅಥವಾ ಊಟ ತಿಂಡಿ, ಯಾವುದೇ ತಿನಿಸು ಆದರೂ ಕೂಡ ಇಷ್ಟವಾಗುತ್ತದೆ ಅದರಲ್ಲೂ ಅವರ ತಾಯಿ ಮಾಡಿದ ಅಡುಗೆ ಅಚ್ಚು ಮೆಚ್ಚು ಆಗಿರುತ್ತದೆ ಮದುವೆ ಆದ ನಂತರ ತಮ್ಮ ಗಂಡನ ಮನೆಗೆ ಹೊಂದಿಕೊಂಡು ಹೋಗುವುದು ಮೊದಮೊದಲು ತುಂಬಾ ಕಷ್ಟವಾಗುತ್ತದೆ ಇದನ್ನು ಎಲ್ಲಾ ಹೆಣ್ಣು ಮಕ್ಕಳು ಕೂಡ ಅನುಭವಿಸಿರುತ್ತಾರೆ, ತುಂಬಾ ಮನೆಗಳಲ್ಲಿ ನಿಮ್ಮ ತವರ ಮನೆಯಲ್ಲಿ ಹೇಗಿತ್ತು ಗೊತ್ತಿಲ್ಲ ಆದರೆ ನಮ್ಮ ಮನೆಯ ರೀತಿ ರಿವಾಜಿಗಳು ಎಲ್ಲವೂ ಈ ರೀತಿಯಾಗಿದೆ ನೀನು ಇದಕ್ಕೆ ಹೊಂದಿಕೊಳ್ಳಲೇಬೇಕು



ಎನ್ನುವಂತಹ ಮಾತುಗಳು ಬಂದಿರುತ್ತವೆ.

ಮದುವೆಯಾಗಿ ಬಂದ ಹೊಸತರಲಿ ನನಗೂ ಕೂಡ ಎಲ್ಲರಿಗೂ ಆದಂತೆ ಊಟ ತಿಂಡಿಯ ವಿಚಾರದಲ್ಲಿ ಸ್ವಲ್ಪಮಟ್ಟಿನ ಕಿರಿಕಿರಿಯಾಗುತ್ತಿತ್ತು ಅಲ್ಲಿಗೂ ಇಲ್ಲಿಗೂ ತುಂಬಾ ಬದಲಾವಣೆಗಳಿರುತ್ತಿದ್ದವು, ಅಮ್ಮನ ಮನೆಯಲ್ಲಿ ನಮಗೆ ಬೆಳ್ಳಳ್ಳಿ ಇಲ್ಲದೆ ಅಡುಗೆ ಮಾಡುವುದೇ ಗೊತ್ತಿರಲಿಲ್ಲ ಹಾಗೂ ನೀರುಳ್ಳಿ ಇಲ್ಲದ ಚಿತ್ರನ್ನಾ ಇರುತ್ತದೆ ಎಂದು ಕೂಡ ನಮಗೆ ಅನಿಸಿರಲಿಲ್ಲ ಆದರೆ ಗಂಡನ ಮನೆಗೆ ಬಂದಾಗ ಬೆಳ್ಳುಳ್ಳಿ ನಿಷಿದ್ಧವಾಗಿತ್ತು ಹಾಗೂ ಚಿತ್ರನ್ನಾಕ್ಕೆ ನೀರುಳ್ಳಿ ಬಳಸುತ್ತಲೇ ಇರಲಿಲ್ಲ,, ಅಲ್ಲೆಲ್ಲಾ ರೊಟ್ಟಿ, ಚಪಾತಿಗೇ ಮೂರು ನಾಲ್ಕು ತರಹದ ವಿಧವಿಧ ಪಲ್ಯಗಳು ಬಳಸುತ್ತಿದ್ದೆವು ಆದರೆ ಇಲ್ಲಿ ಪಲ್ಯಗಳ ರೂಢಿ ಕಡಿಮೆ ಹಾಗೂ ಮಾಡುವ ರೀತಿಯೂ ಬೇರೆಯಾಗಿರುತ್ತೆ ಹೀಗೆ ಎಷ್ಟೋ ಚಿಕ್ಕಪುಟ್ಟ ವಿಷಯಗಳು ಕೂಡ ಕೆಲವೊಮ್ಮೆ ಕಿರಿಕಿರಿಯಾಗುತ್ತಿದ್ದವು..

ಮೊದಮೊದಲು ನನಗೆ ಕೆಲವು ಅಡಿಗೆ ಮಾಡಿದಾಗ ಹೆಚ್ಚಾಗಿ ಊಟ ಸೇರುತ್ತಿರಲಿಲ್ಲ ಕೊನೆ ಕೊನೆಗೆ ನಮ್ಮತ್ತೆ ಅದನ್ನೆಲ್ಲ ಗಮನಿಸಿದಾಗ ಒಂದು ಮಾತನ್ನು ಹೇಳಿದರು ನಿನಗೆ ಯಾವ ರೀತಿಯ ಪಲ್ಯಗಳು ಅಥವಾ ಚಟ್ನಿ ಬೇಕು ಅನಿಸುತ್ತದೆ ಅದನ್ನೇ ಮಾಡಿಕೊ, ನಿನಗೂ ಕೂಡ ಮೊದಮೊದಲು ಎಲ್ಲದನ್ನು ಹೊಂದಿಕೊಂಡು ಹೋಗಲು ಕಷ್ಟವಾಗುತ್ತದೆ ನಂತರ ನಿನಗೆ ಇಲ್ಲಿನ ಅಡಿಗೆ ಅಭ್ಯಾಸವಾಗುತ್ತದೆ ಎಂದು ಹೇಳಿದರು. ಆಗ ಬೆಟ್ಟದಂತೆ ಇದ್ದ ಸಮಸ್ಯೆ ಒಂದೇ ಮಾತಿನಲ್ಲೇ ಮುಗಿದೆ ಹೋಯಿತು ಸ್ವಲ್ಪ ದಿನ ನಾನು ಬೇಕಾದ್ದನ್ನು ಮಾಡಿಕೊಂಡು ತಿನ್ನುತ್ತಿದ್ದೆ ನಂತರ ಅದನ್ನು ಎಲ್ಲರೂ ಇಷ್ಟ ಪಟ್ಟು ತಿನ್ನುತ್ತಿದ್ದರು ಕೂಡ, ಸ್ವಲ್ಪ ದಿನದ ನಂತರ ಇಲ್ಲಿನಾ ಅಡಿಗೆಯೂ ಕೂಡ ನನಗೆ ಹೋಗ್ಗಿ ಹೋಯಿತು,, ಮೊದಲೆಲ್ಲ ಬೆಳ್ಳುಳ್ಳಿ ಇಲ್ಲದೆ ಅಡುಗೆ ಹೇಗೆ ಮಾಡುತ್ತಾರೋ ಎಂದು ಅಂದುಕೊಳ್ಳುತ್ತಿದ್ದಳು ಈಗ ಬೆಳ್ಳುಳ್ಳಿ ಅಂದರೆ ನನಗೆ ಅಷ್ಟಾಗಿ ಇಷ್ಟಾ ಆಗದಂತಾಗಿದೆ..

ನನಗೆ ನಮ್ಮತ್ತೆ ಆಡಿದ ಮಾತು ತುಂಬಾ ಆಶ್ಚರ್ಯವನಿಸಿತು ಅದು ಹೇಗೆ ಒಬ್ಬ ಅತ್ತೆ ಹೀಗೆ ಹೇಳಬಹುದು ಎಂದು ಆದರೆ ನಮ್ಮತ್ತೆ ತುಂಬಾ ಸಾರಿ ಅವರ ಅತ್ತೆಯನ್ನು ನೆನಪಿಸಿಕೊಳ್ಳುತ್ತಿದ್ದರು, ನಾನು ಕೂಡ ನಿನ್ನಂತೆ ಮದುವೆಯಾದಾ ಹೊಸತರಲಿ ಊಟ ತಿಂಡಿಗಳಿಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತಿತ್ತು ಆಗ ನಮ್ಮ ಅತ್ತೆ ನಿನಗೆ ಯಾವ ರೀತಿ ಅಡುಗೆ ಬೇಕು ಅದನ್ನು ನೀನು ಮಾಡಿಕೊಳ್ಳಮ್ಮ ಪರವಾಗಿಲ್ಲ ಎಲ್ಲರಿಗೂ ಬೇಕಾದಂತ ಅಡುಗೆಯನ್ನು ನಾವು ಮಾಡುತ್ತೇವೆ ನಿನಗೆ ಹೇಗೆ ಬೇಕೋ ಹಾಗೆ ಮಾಡಿಕೋ ಎಂದು ಹೇಳುತ್ತಿದ್ದರಂತೆ ಅದನ್ನು ಕೇಳಿ ನನಗೆ ನಿಜವಾಗಲೂ ಆಶ್ಚರ್ಯವಾಯಿತು ಇದು ಸುಮಾರು 50 ವರ್ಷದ ಹಿಂದಿನ ಮಾತು,ಆಗೆಲ್ಲ ಅತ್ತೆ ಸೊಸೆಯಂದಿರು ಅಂದರೆ ಬದ್ದ ವೈರಿಗಳೆನೋ,ಯಾವುದೋ ಜನ್ಮದಲ್ಲಿ ವೈರಿಗಳಾದರು ಈಗ ಒಂದೇ ಮನೆ ಸೇರಿದ್ದಾರೆನೋ,ಅತ್ತೆ ಇರುವುದೇ ಸೊಸೆಗೆ ಹಿಂಸೆ ಕೊಡಲು ಎನ್ನುವಂತೆ ಇರುತ್ತಿದ್ದ ಕಾಲವದು ಈಗಿನಂತೆ ಅತ್ತೆ, ಸೊಸೆಗಳು ಸ್ನೇಹಿತರಂತೆ ಇರುವುದು, ಸೊಸೆ ಇಷ್ಟ ಕಷ್ಟಗಳನ್ನು ಕೇಳುವುದು ಅಪರೂಪದ ವಿಚಾರ ಅಂತದರಲ್ಲಿ ನಮ್ಮತ್ತೆಯ ಅತ್ತೆ ಅಂದರೆ ನಮ್ಮ ಅಜ್ಜಿಯವರು ಎಷ್ಟೊಂದು ವಿಶಾಲ ಮನಸ್ಸಿನಿಂದ ಸೊಸೆಯನ್ನು ನಡೆಸಿಕೊಳ್ಳುತ್ತಿದ್ದರು ಎಂದು ತುಂಬಾ ಆಶ್ಚರ್ಯ ಹಾಗೂ ಸಂತೋಷವಾಯಿತು.. ಯಾರದೋ ಮನೆ ಹೆಣ್ಣು ಮಗುವನ್ನು ಕರೆತಂದು ಕೇವಲ ಕೆಲಸ ಮಾಡಿಸಿಕೊಳ್ಳುವುದು ಅಥವಾ ಪ್ರತಿ ಮಾತಿಗೂ ಹಂಗಿಸುವುದು ಗಂಡ ಹೆಂಡತಿಯರ ನಡುವೆ ಜಗಳ ತಂದಿಡುವುದನ್ನು ತುಂಬಾ ಜನ ಅತ್ತೆಯರು ಮಾಡುತ್ತಾರೆ ಆದರೆ ಅದೆಲ್ಲವನ್ನು ಬಿಟ್ಟಾಗ ಅವರ ಸಂಸಾರವೂ ಕೂಡ ತುಂಬಾ ಚೆನ್ನಾಗಿರುತ್ತೆ.. ಈಗ ಅವರು ಗಟ್ಟಿ ಇದ್ದಾಗ ಇಷ್ಟೆಲ್ಲ ಹಿಂಸೆ ಕೊಟ್ಟು ಅವರಿಗೆ ವಯಸ್ಸಾದ ಮೇಲೆ ಅಯ್ಯೋ ನನ್ನ ಸೊಸೆ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದರೆ ಏನು ಮಾಡಲು ಆಗುವುದಿಲ್ಲ ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಎನ್ನುವಂತಾಗಿ ಬಿಡುತ್ತದೆ..

ನಮ್ಮ ಅತ್ತೆ ಅವರು ಹಾಗೂ ಅವರ ಅತ್ತೆ ಕೆಲಸದ ನಿಮಿತ್ತ ಬೇರೆ ಬೇರೆ ಕಡೆ ಇದ್ದರು. ಆಗ ಯಾವುದಾದರೂ ರಜೆಗಳಿಗೋ ಅಥವಾ ಹಬ್ಬಗಳಿಗೋ ನಮ್ಮ ಅತ್ತೆ ಊರಿಗೆ ಹೋದಾಗ ಅವರ ಅತ್ತೆ ನೀನು ಅಪರೂಪಕ್ಕೆ ಊರಿಗೆ ಬರುತ್ತೀಯಾ ಹಾಗಾಗಿ ಬೇಗ ಏಳಬೇಕೆಂದೇನಿಲ್ಲಮ್ಮ ಪರವಾಗಿಲ್ಲ ನಾನು ಮಾಡಿಕೊಳ್ಳುತ್ತೇನೆ ನೀನು ತಡವಾಗಿ ಎದ್ದರೂ ತೊಂದರೆ ಇಲ್ಲ, ಗಾಬರಿಯಾಗುವುದು ಬೇಡ ಎಂದು ಹೇಳುತ್ತಿದ್ದರಂತೆ.. ಏನಾದರೂ ಕೆಲಸ ಮಾಡುವಾಗ ಅದು ಕೊಂಚ ತಪ್ಪಾದರೂ ಕೂಡ ಯಾವುದಕ್ಕೂ ರೇಗದೆ,,ಇರಲಿ ಕೆಲಸಮಾಡುವಾಗ ಕೆಲವೊಮ್ಮೆ ತಪ್ಪಾಗುತ್ತದೆ ಎಂದು ಧೈರ್ಯ ಕೊಡುತ್ತಿದ್ದರಂತೆ

ನಂಗಂತೂ ನಮ್ಮತ್ತೆ ಹೇಳುವುದನಲ್ಲ ಕೇಳುತ್ತಿದ್ದರೆ ಓ ನಾನು ಯಾವುದಾದರೂ ಸಿನಿಮಾ ನೋಡುತ್ತಿದ್ದೇನೋ ಅಥವಾ ನಿಜ ಜೀವನದಲ್ಲೂ ಹೀಗೆ ಇರುತ್ತಾ ಅಂತ ಅನಿಸುತ್ತಿತ್ತು ಆದರೆ ನಮ್ಮ ಅತ್ತೆಯ ಪ್ರೀತಿ ಅಥವಾ ಅವರು ನಡೆದುಕೊಳ್ಳುವ ರೀತಿ ನೋಡಿದಾಗ ಅನಿಸುತ್ತಿತ್ತು ಇದು ಅತ್ತೆಯ ಅತ್ತೆಯಿಂದ ಬಂದಿದ್ದು ಪಾರಂಪರಿಕವಾಗಿ ಬರುವುದು ಕೇವಲ ಆಸ್ತಿ ಅಂತಸ್ತು ಅಲ್ಲ, ಹಾಗೂ ಅದು ರಕ್ತದಿಂದಷ್ಟೇ ಅಲ್ಲ ಹೀಗೂ ಬರಬಹುದೇ ಎಂದು ಅನಿಸುತ್ತಿತ್ತು.. ನಮ್ಮ ಅಜ್ಜಿಯ ಈ ಸ್ವಭಾವ ನಮಗೂ ಅಥವಾ ನಮ್ಮ ಮುಂದಿನ ಜನರೇಶನ್ಗು ಕೂಡ ಒಂದು ಒಳ್ಳೆಯ ಉದಾಹರಣೆ ಎನ್ನಬಹುದು..

ಅತ್ತೆ ಎಂದರೆ ಕೇವಲ ಕೆಟ್ಟವರಷ್ಟೇ ಅಲ್ಲ ಒಳ್ಳೆಯವರು ಇರುತ್ತಾರೆ ಎಲ್ಲಾ ಕಾಲದಲ್ಲೂ ಅತ್ತೆಯನ್ನು ಗುಮ್ಮನಂತೆ ಪ್ರತಿಬಿಂಬಿಸಲಾಗಿದೆ ಅಥವಾ ಆ ರೀತಿಯವರು ಕೂಡ ಇರುತ್ತಾರೆ ಆದರೆ ಹಾಗಂತ ಒಳ್ಳೆಯದನ್ನು ಹೇಳಿಕೊಳ್ಳಲು ಆಗದಿದ್ದರೆ ಅಥವಾ ಹೇಳದಿದ್ದರೆ ಎಲ್ಲ ಹೆಣ್ಣು ಮಕ್ಕಳಿಗೂ ಸಂಸಾರ ಅಥವಾ ಅತ್ತೆ ಅಂದರೆ ಹೀಗೆ ಏನೋ ಎನ್ನುವ ಭಯ ಉಂಟಾಗಿಬಿಡುತ್ತದೆ.

ಈಗೆಲ್ಲ ಅತ್ತೆ ಸೊಸೆ ಒಂದೇ ಮನೆಯಲ್ಲಿ ಇರುವುದು ಕಡಿಮೆ ಅದರಲ್ಲೂ ಸಿಟಿಗಳಲ್ಲಂತೂ ಇನ್ನೂ ಕಡಿಮೆ ಹಾಗಾಗಿ ನಾವು ಇಲ್ಲಿ ಹೇಳಿರುವ ಯಾವುದೇ ವಿಷಯಗಳಾದರೂ ಅವರಿಗೆ ಅಷ್ಟೊಂದು ಅರ್ಥವಾಗುವುದಿಲ್ಲ ಅರ್ಥವಾದರು ಕೂಡ ಇದು ಒಂದು ಹೇಳಿಕೊಳ್ಳುವ ವಿಷಯವೇ ಎಂದು ಅನಿಸಬಹುದು ಆದರೆ ಕೊನೆವರೆಗೂ ಒಂದೇ ಮನೆಯಲ್ಲಿ ಇರುವ ಅತ್ತೆ ಸೊಸೆಯರಿಗೆ ಮಾತ್ರ ಈ ರೀತಿಯ ಹೊಂದಾಣಿಕೆಗಳ ಫಲಿತಾಂಶ ಹೇಗಿರುತ್ತದೆ ಎಂದು ಗೊತ್ತಾಗಲು ಸಾಧ್ಯ,ನಮ್ಮ ಹದಿನಾರು ವರ್ಷದ ದಾಂಪತ್ಯದಲ್ಲಿ ನಾನು ನಮ್ಮತ್ತೆಯಿಂದ ಕಲಿತಿದ್ದು ಅದೆಷ್ಟೋ..

ಸಮಯವೇ ಸಂಪತ್ತು, ಸದುಪಯೋಗವೇ ಸಾಧನೆ

ಡಾ. ಈರಪ್ಪ ಲಕ್ಷ್ಮಣ ಘಸ್ತಿ

ವಿದ್ಯಾರ್ಥಿಯ ಬದುಕು ಒಂದು ತೋಟದಂತೆ.ಪಠ್ಯಪುಸ್ತಕಗಳು ಬೀಜವಾದರೆ,ಶಿಕ್ಷಕರ ಮಾರ್ಗದರ್ಶನ ಜೀವಜಲ. ಗ್ರಂಥಾಲಯ ಗೊಬ್ಬರವಾದರೆ, ಅಂತರ್ಜಾಲ ಬಿಸಿಲು. ಇದರ ಜೊತೆಗೆ ಸಮಯ ಮತ್ತು ಶ್ರಮ ಎಂಬ ಎರಡು ಅಮೂಲ್ಯ ಬಂಡವಾಳಗಳು ಕೈಯಲ್ಲಿವೆ. ಈ ಸಂಪನ್ಮೂಲಗಳನ್ನು ಯೋಜಿಸಿ ಬಳಸಿದವನೇ ಜ್ಞಾನದ ಫಸಲು ಕೊಯ್ಯುತ್ತಾನೆ. ಗುರಿಯಿಲ್ಲದ ಓದು ದಿಕ್ಕು ತಪ್ಪಿದ ದೋಣಿಯಂತೆ. ದಿಕ್ಸೂಚಿ ಹಿಡಿದ ನಾವಿಕನಿಗೆ ಮಾತ್ರ ದಡ ಸೇರುವುದು ಸಾಧ್ಯ.

ಮೊದಲು ಬೇಕಾದ ಪುಸ್ತಕಗಳನ್ನು ಆಯ್ದು ವಿಷಯವಾರು ಜೋಡಿಸಬೇಕು. ಕೇವಲ ಓದಿ ಮುಗಿಸಿದರೆ ಸಾಲದು. ಮುಖ್ಯ ಅಂಶಗಳನ್ನು ಸ್ವಂತ ಮಾತಿನಲ್ಲಿ ಟಿಪ್ಪಣಿ ಮಾಡಿ,ದಿನವೂ ಮೆಲುಕು ಹಾಕಬೇಕು. ಗುರು ಹೇಳುವ ಮಾತನ್ನು ಮನಸ್ಸಿನಲ್ಲಿ ನೆಟ್ಟರೆ ಮಾತ್ರ ವಿದ್ಯೆ ಫಲ ನೀಡುತ್ತದೆ. ಇಂದು ಮಾಹಿತಿಯ ಸಾಗರ ಕೈಯಲ್ಲಿದೆ. ಅದರಲ್ಲಿ ಮುಳುಗದೆ ಮುತ್ತು ಆರಿಸುವ ವಿವೇಕ ಬೇಕು. ಚಿತ್ರ, ವಿಡಿಯೊ,ಪ್ರಶ್ನೋತ್ತರಗಳನ್ನು ಅಳತೆ ಮೀರಿ ಬಳಸಿದರೆ ಕಲಿಕೆ



ಆಟವಾಗಿ ಬಿಡುತ್ತದೆ.

ವಿಜ್ಞಾನ ಹೇಳುತ್ತದೆ,ಬೇರೆಬೇರೆ ಮೂಲಗಳಿಂದ ಕಲಿತಾಗ ಮೆದುಳಿನಲ್ಲಿ ಹೊಸ ಸಂಪರ್ಕಗಳು ಮೂಡುತ್ತವೆ. ಪದೇ ಪದೇ ಅಭ್ಯಾಸ ಮಾಡಿದರೆ ನೆನಪು ಗಟ್ಟಿಯಾಗುತ್ತದೆ. ಗಂಟೆಗಟ್ಟಲೆ ಪರದೆಯ ಮುಂದೆ ಕೂರುವ ಬದಲು, 25 ನಿಮಿಷ ಓದು, 5 ನಿಮಿಷ ವಿರಾಮದ ಶಿಸ್ತು ಮನಸ್ಸನ್ನು ಜಾಗೃತವಾಗಿಸುತ್ತದೆ. ಸಮಯವನ್ನು ಲೆಕ್ಕ ಹಾಕಿ ನಡೆಯುವವನಿಗೆ ಸೋಲು ದೂರವಾಗುತ್ತದೆ.

ಸಂಪನ್ಮೂಲದ ಸದುಪಯೋಗ ಎಂದರೆ ಕೇವಲ ಅಂಕಗಳ ಏರಿಕೆಯಲ್ಲ. ಅದು ವ್ಯಕ್ತಿತ್ವದ ಬೆಳವಣಿಗೆ. ಶಿಸ್ತು, ಆತ್ಮವಿಶ್ವಾಸ, ಸ್ಪಷ್ಟ ಚಿಂತನೆಗಳು ತಾನಾಗಿಯೇ ಅರಳುತ್ತವೆ. ಕೈಯಲ್ಲಿರುವ ಕಲ್ಲನ್ನೂ ವಜ್ರವಾಗಿಸುವ ಕಲೆ ತಿಳಿದವನಿಗೆ ವಿಜಯ ದೂರವಿಲ್ಲ. ಆದ್ದರಿಂದ ಇಂದೇ ಸಂಕಲ್ಪ ಮಾಡೋಣ. ಇರುವುದನ್ನು ಅರಿತು, ಸಿಕ್ಕಿದ್ದನ್ನು ಸರಿಯಾಗಿ ಬಳಸಿ, ಸಾಧನೆಯ ಶಿಖರ ಏರೋಣ.

ಬದ್ಧತೆಯ ಬೆಳಕು: ಮೊದಲ ಆದಿವಾಸಿ ನ್ಯಾಯಾಧೀಶೆ

ಡಾ.ಸುಧಾಕರ.ಜಿ.ಲಕ್ಕವಳ್ಳಿ

ಹರಿಗೆಯ ಗಾಯ ಇನ್ನೂ ಆರಿಲ್ಲ,ಹೊಲಿಗೆಯ ನೋವು ಇಳಿದಿಲ್ಲ. ಅಂತಹ ಅಸಹನೀಯ ಯಾತನೆಯಲ್ಲೂ ತಮಿಳುನಾಡಿನ ಜವ್ವಾದು ಬೆಟ್ಟದ ಆದಿವಾಸಿ ಮಹಿಳೆ ಶ್ರೀಪತಿ ಅವರು ತೋರಿದ ಧೈರ್ಯ ರೋಮಾಂಚನಕಾರಿ. ಹೆಣ್ಣು ಮಗುವಿಗೆ ಜನ್ಮ ನೀಡಿದ ಎರಡೇ ದಿನಕ್ಕೆ, ನವಜಾತ ಶಿಶುವಿನೊಂದಿಗೆ 200 ಕಿಲೋಮೀಟರ್ ದೂರ ಪ್ರಯಾಣಿಸಿ ಸಿವಿಲ್ ಜಡ್ಜ್ ಪರೀಕ್ಷೆ ಬರೆದರು. ನೋವನ್ನು ಛಲದಿಂದ ಮೀರಿ, ಕನಸಿನ ಹಾದಿಯಲ್ಲಿ ದೃಢ ಹೆಜ್ಜೆ ಇಟ್ಟರು.

ಸ್ಫೂರ್ತಿ ಸುಧೆ - 75

ತಮ್ಮ ಸಮುದಾಯದ ಹಕ್ಕುಗಳ ಬಗ್ಗೆ ಇರುವ ಅರಿವಿನ ಕೊರತೆಯೇ ಶ್ರೀಪತಿ ಅವರನ್ನು ಕಾನೂನಿನ ಕಡೆ ಸೆಳೆಯಿತು. ನನ್ನ ಜನರಿಗೆ ನ್ಯಾಯ ದೊರಕಿಸಬೇಕು ಎಂಬ ಸಂಕಲ್ಪ ಅವರ ಬದುಕಿನ ದೀವಟಿಗೆಯಾಯಿತು. ವರ್ಷಗಳ ಪರಿಶ್ರಮವನ್ನು ಹೆರಿಗೆ ನೋವಿಗೆ ಬಲಿಕೊಡಲು ಅವರು ಸಿದ್ಧರಿರಲಿಲ್ಲ. ಕುಟುಂಬದ ಬೆಂಬಲದೊಂದಿಗೆ ಪರೀಕ್ಷಾ ಕೇಂದ್ರ ತಲುಪಿ, ಅಚಲ ಮನೋಬಲದಿಂದ ಪರೀಕ್ಷೆ ಎದುರಿಸಿದರು. ಅವರ ಶ್ರಮಕ್ಕೆ ಫಲ ಸಿಕ್ಕಿದೆ. ತಮಿಳುನಾಡಿನ ಮೊಟ್ಟಮೊದಲ ಆದಿವಾಸಿ ಮಹಿಳಾ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿ ಇತಿಹಾಸ ನಿರ್ಮಿಸಿದ್ದಾರೆ. ಇಂದು ಶ್ರೀಪತಿ ಅವರು ತಮ್ಮ ಜನರ ಹಕ್ಕಿನ ಅಧಿಕೃತ ಧ್ವನಿಯಾಗಿದ್ದಾರೆ.

ಬದ್ಧತೆ ಮತ್ತು ಛಲವಿದ್ದರೆ ದೈಹಿಕ ಕಷ್ಟಗಳೂ ಸಾಧನೆಗೆ ಅಡ್ಡಿಯಾಗಲಾರವು ಎಂಬುದಕ್ಕೆ ಶ್ರೀಪತಿ ಅವರೇ ಸಾಕ್ಷಿ. ಸಾಮಾಜಿಕ ಜಾಲತಾಣದಲ್ಲಿ ಅವರ ಸಾಧನೆ ವೈರಲ್ ಆಗಿದ್ದು, ಮುಖ್ಯಮಂತ್ರಿ ಸೇರಿದಂತೆ ಗಣ್ಯರು ದಿಟ್ಟತನವನ್ನು ಕೊಂಡಾಡಿದ್ದಾರೆ. ಇದು ಲಕ್ಷಾಂತರ ಹೆಣ್ಣುಮಕ್ಕಳಿಗೆ ಸ್ಫೂರ್ತಿಯ ಸೆಲೆ.

ಹೋರಾಟ/ಸತ್ಯಾಗ್ರಹ ಅನ್ಯಾಯದ ವಿರುದ್ಧವಾಗಿರಲಿ; ರಾಜಕೀಯ, ಧರ್ಮ-ಜಾತಿ ನಿಂದನೆಯಿಂದ ದೂರವಿರಲಿ

ಶಿವಬಸಪ್ಪ ಗು ಜಂಗಾಲಿ

ಹೋರಾಟ ಎಂಬ ಪದ ಕೇಳಿದಾಗ ನಮ್ಮ ಕಣ್ಮುಂದೆ ಕಾಣಿಸಿಕೊಳ್ಳುವುದು ಘೋಷಣೆಗಳ ಮೊರೆ, ಜನಸಾಗರದ ಅಲೆ, ಅನ್ಯಾಯದ ವಿರುದ್ಧ ಎದ್ದುಕೇಳುವ ಧೈರ್ಯದ ಧ್ವನಿ. ಆದರೆ ನಿಜವಾದ ಹೋರಾಟದ ಅರ್ಥ ಅದಕ್ಕಿಂತಲೂ ವಿಶಾಲವಾಗಿದೆ. ಅದು ಕೇವಲ ಪ್ರತಿಭಟನೆಯ ರೂಪವಲ್ಲ; ಸಮಾಜದ ಮನಸ್ಸಿಗೆ ಪ್ರಶ್ನೆ ಕೇಳುವ ಒಂದು ನೈತಿಕ ಜವಾಬ್ದಾರಿ. ಸತ್ಯಾಗ್ರಹ ಎಂದರೆ ಎದುರಾಳಿಯನ್ನು ಸೋಲಿಸುವ ಸಾಧನವಲ್ಲ; ಸತ್ಯವನ್ನು ಸಮಾಜದ ಮುಂದೆ ನಿಲ್ಲಿಸಿ ನ್ಯಾಯದತ್ತ ಸಾಗುವ ಅಹಿಂಸೆಯ ಪಥ.

ಯಾವುದೇ ಹೋರಾಟದ ಮೂಲ ಉದ್ದೇಶ ಜನರ ನೋವನ್ನು ಪರಿಹರಿಸುವುದಾಗಿರಬೇಕು. ಕುಡಿಯುವ ನೀರಿನ ಕೊರತೆ, ರೈತರ ಸಂಕಷ್ಟ, ಕಾರ್ಮಿಕರ ಹಕ್ಕುಗಳು, ಮಹಿಳೆಯರ ಸುರಕ್ಷತೆ, ಯುವಕರ ಉದ್ಯೋಗ, ಶಿಕ್ಷಣದ ಗುಣಮಟ್ಟ, ಪರಿಸರದ ಸಂರಕ್ಷಣೆ ಇವುಗಳಂತಹ ಜನಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಸಮಾಜದ ಚರ್ಚೆಯ ಕೇಂದ್ರವಾಗಬೇಕು. ಸಮಸ್ಯೆಯೇ ಹೋರಾಟದ ವಿಷಯವಾಗಬೇಕು; ವ್ಯಕ್ತಿ, ಸಮುದಾಯ ಅಥವಾ ನಂಬಿಕೆಗಳಲ್ಲ.

ಸತ್ಯಾಗ್ರಹದ ಶಕ್ತಿ ಅದರ ಶಾಂತ ಸ್ವಭಾವದಲ್ಲಿದೆ. ಅಹಿಂಸೆ ಎಂದರೆ ದುರ್ಬಲತೆ ಅಲ್ಲ; ಅದು ಸಂಯಮದ ಶ್ರೇಷ್ಠ ರೂಪ. ಕ